Swabhimani Sahakari
Pages : 36 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 16
Issue - 6
June- 2019

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ



## ಶ್ರೀ ನರೇಂದ್ರ ಮೋದಿ 2ನೇ ಬಾರಿ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕಾರ

## ನೂತನ ಕೇಂದ್ರ ಸಂಪುಟದಲ್ಲಿ ಕರ್ನಾಟಕದ ನಾಲ್ಕು ಸಂಸದರಿಗೆ ಒಲಿದ ಸಚಿವ ಸ್ಥಾನ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 4670

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1248



ಶ್ರೀ ಡಿ.ವಿ. ಸದಾನಂದ ಗೌಡ
ರಾಸಾಯನಿಕ ಮತ್ತು
ರಸಗೊಬ್ಬರ ಖಾತೆ,



ಶ್ರೀಮತಿ ನಿರ್ಮಲಾ ಸೀತಾರಾಮನ್
ಹಣಕಾಸು ಖಾತೆ



ಶ್ರೀ ಪ್ರಹ್ಲಾದ್ ಜೋಶಿ
ಸಂಸದೀಯ ವ್ಯವಹಾರಗಳ ಖಾತೆ



ಶ್ರೀ ಸುರೇಶ ಚನ್ನಬಸಪ್ಪ ಅಂಗಡಿ
ರೈಲ್ವೆ ರಾಜ್ಯ ಸಚಿವ ಖಾತೆ

ಸ್ವಾಭಿಮಾನಿ ಸಹಕಾರಿ





ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಈ ರಾಜ್ಯದಿಂದ 28 ಜನರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಇವರಲ್ಲಿ ಕೆಲವರು ಯುವಕರು, 2 ಮಹಿಳೆಯರು, ಕೆಲವರು ಹೊಸಬರು, ಹೆಚ್ಚಿನವರು ಅನುಭವಿಗಳು. ಈ ಎಲ್ಲ ನೂತನ ಸಂಸದರಿಗೆ ಹಾಗೂ ಸಚಿವರುಗಳಾಗಿ ನೇಮಕಗೊಂಡಿರುವ ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ಪ್ರಹ್ಲಾದ್ ಜೋಶಿ, ಶ್ರೀ ಸುರೇಶ ಚನ್ನಬಸಪ್ಪ ಅಂಗಡಿ ಹಾಗೂ ಕರ್ನಾಟಕ ರಾಜ್ಯ ಸಭೆ ಸದಸ್ಯರಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರುಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದಿಸುತ್ತೇನೆ.

## ಕರ್ನಾಟಕದಿಂದ 17ನೇ ಲೋಕಸಭೆಗೆ ಆಯ್ಕೆಯಾಗಿರುವ ಸಂಸದರಿಗೆ ಹಾಗೂ ನೂತನ ಸಚಿವರಿಗೆ ಅಭಿನಂದನೆಗಳು.

## ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿ ವಹಿಸಲು ಸೌಹಾರ್ದ ಸಹಕಾರಿಗಳ ಮನವಿ.

## ನೂತನ ಸಂಸದರಿಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ನೀಡುವ ಕಾರ್ಯವನ್ನು ಸಹಕಾರಿಗಳು ಮಾಡುವುದು ಅಗತ್ಯ.

**ಆತ್ಮೀಯ ಸಹಕಾರಿ ಬಂಧುಗಳೇ,**

17ನೇ ಲೋಕಸಭಾ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಲು ಸಹಕರಿಸಿ ಪ್ರಜಾಪ್ರಭುತ್ವದ ಅಡಿಪಾಯವನ್ನು ಮತ್ತಷ್ಟು ಭದ್ರಗೊಳಿಸಲು ಶ್ರಮಿಸಿದ ರಾಜ್ಯದ ಸೌಹಾರ್ದ ಎಲ್ಲ ಸಹಕಾರಿಗಳಿಗೆ ಹೃದಯ ಪೂರ್ವಕ ಅಭಿನಂದನೆಗಳು. ಹಾಗೂ ರಾಜ್ಯದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಮುಸ್ಲಿಮ್ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯಗಳು.

ಈ ರಾಜ್ಯದಿಂದ 28 ಜನರು ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಇವರಲ್ಲಿ ಕೆಲವರು ಯುವಕರು, 2 ಮಹಿಳೆಯರು, ಕೆಲವರು ಹೊಸಬರು, ಹೆಚ್ಚಿನವರು ಅನುಭವಿಗಳು. ಈ ಎಲ್ಲ ನೂತನ ಸಂಸದರಿಗೆ ಹಾಗೂ ಸಚಿವರುಗಳಾಗಿ ನೇಮಕಗೊಂಡಿರುವ ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ಪ್ರಹ್ಲಾದ್ ಜೋಶಿ, ಶ್ರೀ ಸುರೇಶ ಚನ್ನಬಸಪ್ಪ ಅಂಗಡಿ ಹಾಗೂ ಕರ್ನಾಟಕ ರಾಜ್ಯ ಸಭೆ ಸದಸ್ಯರಾಗಿರುವ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರುಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದಿಸುತ್ತೇನೆ. ಇವರುಗಳ ಅಧಿಕಾರದ ಅವಧಿಯಲ್ಲಿ ದೇಶದ ಅಭಿವೃದ್ಧಿಯ ಜೊತೆಗೆ ಈ ರಾಜ್ಯದ ಸಮಸ್ಯೆಗಳು ಅವರುಗಳ ಕ್ಷೇತ್ರದ ಸಮಸ್ಯೆಗಳ ಹಾಗೂ ದೇಶದ ಶ್ರೀ ಸಾಮಾನ್ಯರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಕಡೆಗೆ ಗಮನ ಹರಿಸುವುದು ಸಹಜ. ಈ ಸಂದರ್ಭದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಹಾಗೂ ಸಮಸ್ತ ಸಹಕಾರಿ ಕ್ಷೇತ್ರದ ಪರವಾಗಿ ಈ ನೂತನ ಸಂಸದರಿಗೆ ಈ ಮನವಿಯ ಮೂಲಕ ತಿಳಿಯ ಪಡಿಸುವುದೇನಂದರೆ ಸಹಕಾರ ಕ್ಷೇತ್ರ ಈ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. ಈ ದೇಶದಲ್ಲಿ 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳಿವೆ. 30 ಕೋಟಿ ಜನರು ಈ ಕ್ಷೇತ್ರದಡಿಯಲ್ಲಿ ಸದಸ್ಯರಾಗಿ ಫಲಾನುಭಾವಿಗಳಾಗಿದ್ದಾರೆ. ಸಹಕಾರ ಕ್ಷೇತ್ರ ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದು ಬಂದಿದೆ. ಇಂತಹ ಸಹಕಾರ ಕ್ಷೇತ್ರವನ್ನು ಯಶಸ್ವಿಯಾಗಿ ಗುಣಾತ್ಮಕವಾಗಿ ಅಭಿವೃದ್ಧಿಯತ್ತ ತೆಗೆದುಕೊಂಡುಹೋಗುವಲ್ಲಿ ಸರಕಾರದ ಪಾತ್ರ ಮಹತ್ವದ್ದಾಗಿದೆ. ಸರಕಾರದ ನಿರ್ಧಾರಗಳು ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿರುವಂತೆ ಸಹಕಾರ ಕ್ಷೇತ್ರ ದುರ್ಬಲವಾಗದಂತೆ ಈ ಕ್ಷೇತ್ರಕ್ಕೆ ತಮ್ಮೆಲ್ಲರ ಸಹಕಾರ ಹಾಗೂ ಪ್ರೋತ್ಸಾಹ ನೀಡುವಂತೆ ಮನವಿ.

ಎರಡನೇಯದಾಗಿ ತಮ್ಮ ಗಮನಕ್ಕೆ ತರಬಯಸುವುದೇನಂದರೆ ಈ ರಾಜ್ಯದಲ್ಲಿ 2001 ರಿಂದ ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯನಿರ್ವಹಿಸುತ್ತಿದೆ. ದೇಶದಲ್ಲಿಯೇ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣದ ಧ್ಯೇಯದಿಂದ ಸೌಹಾರ್ದ ಸಹಕಾರಿಗಳಿಂದಲೇ ಆಯ್ಕೆಯಾಗಿರುವ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಿಂದ ಶಾಸನ ಬದ್ಧ ಕಾರ್ಯನಿರ್ವಹಣೆ ವಿನೂತನ ಹಾಗೂ ವಿಶಿಷ್ಠ ರೀತಿಯ ಗುಣಮಟ್ಟದ ತರಬೇತಿಯನ್ನು ಒದಗಿಸುವ ವಿನೂತನ ವ್ಯವಸ್ಥೆ ಇದಾಗಿದೆ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 4670 ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು 50 ಲಕ್ಷಕ್ಕೂ ಹೆಚ್ಚು ಸದಸ್ಯರು, 55000ಕ್ಕೂ ಹೆಚ್ಚು ಉದ್ಯೋಗ ಒದಗಿಸಿದ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಈ ಯಶಸ್ಸನ್ನು ಗುರುತಿಸಿದ ರಾಜ್ಯದ ವಿಶ್ವವಿದ್ಯಾಲಯಗಳು, ರಾಷ್ಟ್ರ ಹಾಗೂ ಅಂತರ ರಾಷ್ಟ್ರ ಮಟ್ಟದ ಸಂಸ್ಥೆಗಳು ಅಧ್ಯಯನ ಮಾಡಲು ಮುಂದಾಗಿವೆ. ಈ ಕ್ಷೇತ್ರದ ಅಪೂರ್ವ ಸಾಧನೆಯ ಜೊತೆಗೆ ಹಲವಾರು ಸಮಸ್ಯೆಗಳಿವೆ ಈ ಸಮಸ್ಯೆಗಳ ಪರಿಹಾರಕ್ಕೆ ಹಾಗೂ ಈ ಕ್ಷೇತ್ರವನ್ನು ಬಲಪಡಿಸಲು ತಮ್ಮೆಲ್ಲರ ಪ್ರೋತ್ಸಾಹ ಹಾಗೂ ಸಹಕಾರವನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಅಪೇಕ್ಷಿಸುತ್ತದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ತಮ್ಮ ಭಾಗದ ಸಂಸದರಿಗೆ ಗೌರವಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಸ್ತಿತ್ವ ಬಗ್ಗೆ ನಿರಂತರ ಮಾಹಿತಿ ನೀಡುವ ಕಾರ್ಯಚಟುವಟಿಕೆಗಳನ್ನು ಹಾಕಿಕೊಳ್ಳುವುದು ಅಗತ್ಯವೆಂದು ಸಂಯುಕ್ತ ಸಹಕಾರಿಯು ಭಾವಿಸಿದೆ. ಈ ನಿಟ್ಟಿನಲ್ಲಿ ತಾವುಗಳು ಕಾರ್ಯನಿರತರಾಗುವಿರಾಗಿ ಭಾವಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

ಒಳಪುಟಗಳಲ್ಲಿ. . .

ಜ್ಞಾನ ಜ್ಯೋತಿ ................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ..
.................................................. 5–16
ಸೌಹಾರ್ದ ಸಹಕಾರಿಗಳ ಸಮಾಚಾರಗಳು ...
.................................................. 17–25
ಲೇಖನ...................................... 26–33
ಆರ್‌ಬಿ.ಐ. ನ್ಯೂಸ್...................... 34–36

# ಸಂಪಾದಕೀಯ

## ಸಹಕಾರ ಕ್ಷೇತ್ರದ ಪರಿಣಾಮಕಾರಿ ಕಾರ್ಯನಿರ್ವಹಣೆಯ ಅವಶ್ಯಕತೆಯ ಹಿನ್ನೆಲೆಯಲ್ಲಿ ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯದ ಅಗತ್ಯತೆ

ನಮ್ಮ ದೇಶದಲ್ಲಿ ಸಹಕಾರ ಕ್ಷೇತ್ರ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. 8 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಹಕಾರ ಸಂಘಗಳು 30 ಕೋಟಿಗೂ ಹೆಚ್ಚು ಸದಸ್ಯರು ಇರುವ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ತನ್ನದೇ ಆದ ಕೊಡುಗೆಯನ್ನು ಕೊಡುತ್ತ ಬಂದಿದೆ. ಈ ದೇಶದ ಜನರ ಜೀವನ ಪದ್ಧತಿಯಾಗಿದೆ. ದೇಶದ ಪ್ರತಿಯೊಂದು ಗ್ರಾಮ ಹಾಗೂ ಕೃಷಿ ಕುಟುಂಬವನ್ನು ಈ ಸಹಕಾರ ಕ್ಷೇತ್ರ ಆವರಿಸಿದೆ. ದೇಶದ ಗ್ರಾಮೀಣ ಬಡ ಜನರ ಹಾಗೂ ಹಿಂದುಳಿದ ವರ್ಗದವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಹಕಾರವೊಂದು ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ.

ಸಹಕಾರ ರಾಜ್ಯಗಳ ವಿಷಯ ಪ್ರತಿಯೊಂದು ರಾಜ್ಯವು ತನ್ನದೇ ಆದ ಸಹಕಾರ ಕಾಯ್ದೆಯನ್ನು ಹೊಂದಿದೆ. ಕೇಂದ್ರದಲ್ಲಿ ಬಹು ರಾಜ್ಯಗಳ ಸಹಕಾರ ಕಾಯ್ದೆ ಜಾರಿಯಲ್ಲಿದೆ. ಪ್ರತಿ ರಾಜ್ಯಗಳಲ್ಲಿರುವ ಸಹಕಾರ ಕಾಯ್ದೆಗಳು ಅನೇಕ ವಿಭಿನ್ನತೆಗಳನ್ನು ಹೊಂದಿವೆ. 97ನೇ ಸಂವಿಧಾನ ಕಾಯ್ದೆ ತಿದ್ದುಪಡಿಯಾದ ನಂತರ ಎಲ್ಲ ರಾಜ್ಯಗಳ ಸಹಕಾರ ಕಾಯ್ದೆಗಳಲ್ಲಿ ಬಹುತೇಕ ಸಾಮ್ಯತೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ರಾಜ್ಯಗಳು ವಿಭಿನ್ನ ನಿಲುವುಗಳನ್ನು ತಳೆದು ಅದನ್ನ ತಮ್ಮ ಸಹಕಾರ ಕಾಯ್ದೆಗಳಲ್ಲಿ ಅಳವಡಿಸದೇ ಇರುವುದು ಮತ್ತು ಕೆಲವು ರಾಜ್ಯಗಳು ಸಂಪೂರ್ಣವಾಗಿ ಅಳವಡಿಸದೇ ಮಾರ್ಪಾಡುಗಳನ್ನು ಮಾಡಿಕೊಂಡಿರುವುದು, ದೇಶದಾದ್ಯಂತ ಎಲ್ಲ ರಾಜ್ಯಗಳಲ್ಲಿ ಏಕರೂಪ ಸಹಕಾರ ಕಾಯ್ದೆಯ ಅನುಷ್ಠಾನವಿರುವುದಿಲ್ಲ. ಆದರೆ ಅದರ ಅವಶ್ಯಕತೆ ಇದೆ.

ಕೇಂದ್ರದಲ್ಲಿ ಸಹಕಾರ ಸಚಿವಾಲಯವು ಕೃಷಿ ಸಚಿವಾಲಯದ ಜೊತೆಗೆ ಇದೆ. ಕೃಷಿ ಹಾಗೂ ಸಹಕಾರ ಎರಡು ಒಂದೇ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಸಹಕಾರ ಸಚಿವಾಲಯವು ಪ್ರತ್ಯೇಕವಾಗಿರದಿರುವುದು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ಹರಿಸಲು ಕೇಂದ್ರದಿಂದ ಸಾಧ್ಯವಾಗುತ್ತಿಲ್ಲ. 4–5 ದಶಕಗಳ ಹಿಂದೆ ಸಹಕಾರ ಕ್ಷೇತ್ರದ ಬೆಳವಣಿಗೆ ಅಷ್ಟಾಗಿರಲಿಲ್ಲ. ಹೀಗಾಗಿ ಅದನ್ನು ಕೃಷಿ ಸಚಿವಾಲಯದ ಜೊತೆಗೆ ಸೇರಿಸಲಾಗಿತ್ತು. ಈಗ ಸಹಕಾರ ಕ್ಷೇತ್ರದ ವಿರಾಟ ಸ್ವರೂಪವನ್ನು ಅದರ ಚಟುವಟಿಕೆಗಳ ಗಾತ್ರ ಗಮನಿಸಿದಾಗ ಕೃಷಿ, ರೈತರ ಕಲ್ಯಾಣ, ಗ್ರಾಮೀಣ ಅಭಿವೃದ್ಧಿಯ ಜೊತೆಗೆ ಸಹಕಾರ ವಿಷಯವನ್ನು ಸೇರಿಸಬೇಕು ಮತ್ತು ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಒಬ್ಬ ರಾಜ್ಯ ಸಚಿವರನ್ನಾಗಿ ಅಥವಾ ಸಹಕಾರವನ್ನು ಸ್ವತಂತ್ರ್ಯ ಕಾರ್ಯನಿರ್ವಹಣೆಗೆ ಸಚಿವರನ್ನು ನೇಮಿಸುವ ಅವಶ್ಯತೆಯಿದೆ. ಈ ಬಗ್ಗೆ ಸಹಕಾರಿಗಳು, ಸಂಸದರು ಹಾಗು ಶಾಸಕರು ಕೇಂದ್ರದ ಗಮನವನ್ನು ಸೆಳೆಯುವುದು ಹಾಗೂ ಪ್ರತ್ಯೇಕ ಸಹಕಾರ ಸಚಿವಾಲಯದ ಸ್ಥಾಪನೆಗೆ ಕ್ರಮವಿಡಬೇಕೆಂದು ಒತ್ತಾಯಿಸುವುದು ಪ್ರಸ್ತುತವೆನಿಸುತ್ತದೆ.

## "ಭಗವಂತನ ಬಹುರೂಪಿತ್ವ"



# ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಸಮಸ್ತ ಜಗತ್ತಿನ ಒಟ್ಟು ಜನಸಂಖ್ಯೆ ಸುಮಾರು 800 ಕೋಟಿಗಳಿರಬಹುದೆಂದು ಅಂದಾಜಿಸಿದ್ದರೂ ಅವರುಗಳೆಲ್ಲರಿಗೆ ಆಹಾರ, ನೀರು ಗಾಳಿಯನ್ನು ಸಮಯಾನುಸಾರ ಸರಬರಾಜು ಮಾಡಿ ಅಷ್ಟೂ ಜನಗಳ ಜೀವಂತಿಕೆಯನ್ನು ಉಳಿಸುತ್ತಿರುವ ವಿಶ್ವದ ಮಹಾಶಕ್ತಿ ಭಗವಂತನೆಂದೂ ಆತನ ಶಕ್ತಿಲೀಲೆಗಳು ಅನೂಹ್ಯ, ಅಚಿಂತ್ಯಗಳೆಂದು ಋಷಿಮುನಿಗಳು, ಚಿಂತನಶೀಲರು, ಆಧ್ಯಾತ್ಮ ಜೀವಿಗಳು ಅಭಿಪ್ರಾಯಿಸಿದ್ದಾರೆ. ದೇವರ ಬಗ್ಗೆ ಹೇಳುತ್ತಾ, "ದೇವನೊಬ್ಬ, ನಾಮ ಹಲವು, ರೂಪ ಹಲವಾರು, ಅಗಣಿತ"– ಎಂದು ಬಸವಾದಿ ಶರಣರು ದೃಢೀಕರಿಸಿದ್ದಾರೆ. ಭಗವಂತನ ಶಕ್ತಿಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲವೆಂದು ಅವನನ್ನು 'ಅಚಿಂತ್ಯ'ನೆಂದು ಕರೆದರು. ಅಂತೆಯೇ ಭಗವಂತನನ್ನು 'ಅದ್ವೈತಂ, ಅಚ್ಯುತಂ, ಅನಾದಿಂ, ಅನಂತರೂಪಂ, ಆದ್ಯಂ ಪುರಾಣಪುರುಷಂ, ನವಯೌವನಾಂಚ', ಅಂದರೆ ಭಗವಂತನು ಅಪ್ರಮೇಯನು, ಪರಾತ್ಪರನು, ಚ್ಯುತಿಯಿಲ್ಲದವನು, ಆದಿ ಮಧ್ಯ ಅಂತ್ಯ ವಿಲ್ಲದವನು, ಅಪರಿಮಿತ ರೂಪಗಳಲ್ಲಿ ವಿಸ್ತೃತಗೊಂಡ ಪ್ರಾಚೀನನೂ, ಮೂಲಪುರುಷನೂ ಆಗಿದ್ದರೂ ನವತರುಣನಂತಿದ್ದಾನೆಂದಿದ್ದಾರೆ.

ಆದರೆ, ಇಂದಿನ ದಿನಮಾನದ ನಾವುಗಳು ನಾಗರೀಕತೆಯ ನಾಗಾಲೋಟದಲ್ಲಿ ತಾಂತ್ರಿಕತೆಯ ತಾಕಲಾಟದಿಂದ ಹಾಗೂ ಹೆಚ್ಚಿದ ವೈಜ್ಞಾನಿಕ ಬೆಳವಣಿಗೆಯಿಂದಾಗಿ ದೇವರ ಇರುವಿಕೆಯನ್ನು ಇಲ್ಲವೆನ್ನುವವರೆಗೂ ಹೋಗುವ ದುಸ್ಸಾಹಸಿಗಳಾಗಿದ್ದೇವೆ. ಹಿಂದಿನ ಪೂರ್ವಜರ ಹಾಗು ಈಗಿನ ಜನರ ಅಭಿಪ್ರಾಯಗಳನ್ನು ಅರ್ಥಮಾಡಿಕೊಂಡ ಆಧ್ಯಾತ್ಮಕವಿ ಡಿ.ವಿ.ಜಿ.ಯವರು ಭಗವಂತನ ಬಹುರೂಪೀ ಅಸ್ತಿತ್ವದ ಬಗ್ಗೆ ಒಂದು ಸುಂದರ ಪದ್ಯವನ್ನು ರಚಿಸಿದ್ದಾರೆ. ದೈವದ ಘನಘೋರ ಉಘ್ರ ಸ್ವರೂಪದಿಂದ ಹಸನ್ಮುಖಿ, ಸೌಭಾಗ್ಯದಾಯಿನಿಯಾದ ಎರಡೂ ರೂಪಗಳು ದೈವದ ಸ್ವರೂಪವೇ ಆಗಿದೆಯೆಂಬ ಆ ಪದ್ಯ ಕೆಳಗಿನಂತಿದೆ:

"ಶ್ಯಾಮ ಸುಂದರನಿವನೆಚಕ್ರ ನರಹರಿಯಂತೆ।
ಸೋಮಶಿವಶಂಕರನೆ ಭೈರವರುದ್ರನಂತೆ ॥
ಹೈಮವತಿ ಶಿವೆ ತಾನೆ ಕಾಳಿಚಂಡಿಕೆಯಂತೆ ।
ಪ್ರೇಮ ಘೋರಗಳೊಂದೆ" ॥ಮಂಕುತಿಮ್ಮ॥

ಹರಸಿ ಹಾರೈಸುವ, ಮನ್ನಿಸಿ ಮುನ್ನಡೆಸುವ, ಕ್ಷಮಿಸಿ ಕಾಪಾಡುವ ಕರುಣಾಮಯಿಯಾದ, ಮಹಾವಿಷ್ಣುವಾಗಲೀ, ಸರಸ್ವತಿ, ಶಾರದಾ, ಮಹಾದೇವಿಯರು ಸದಾ ಹಸನ್ಮುಖಿಗಳಾಗಿ ಶರಣಾಗತರಾಗಿ ಬಂದವರಿಗೆ ಅಭಯವನ್ನೂ, ಎಲ್ಲಾಸ್ತ್ರೀಯರಿಗೆ ಸರ್ವಮಂಗಳೆಯಾಗಿ ಸೌಭಾಗ್ಯಗಳನ್ನು, ವಿದ್ಯಾಪಿಪಾಸುಗಳಿಗೆ ವಿದ್ಯೆ ಜ್ಞಾನಾದಿಗಳನ್ನು ಆಯುಷ್ಯ, ಆರೋಗ್ಯ ಸಂಪತ್ತುಗಳನ್ನು ದಯಪಾಲಿಸುವ ವರದಾಯಿನಿಯರಾಗಿದ್ದಾರೆ.

ಇದೇ ಅಂಶದ ಬಗ್ಗೆ ಪುರುಷ ಸೂಕ್ತದಲ್ಲಿ ವಿವರಿಸುತ್ತಾ, ಭಗವಂತ, ನಾರಾಯಣ, ಪರಮೇಶ್ವರ ದೇವರು ಎನಿಸಿಕೊಂಡ ಪರಬ್ರಹ್ಮನ ವ್ಯಕ್ತ ಸ್ವರೂಪವೇ ಈ ಜಗವೆಂದೂ, ಅಣುರೇಣು ತೃಣಕಾಷ್ಟಗಳಲ್ಲಿ ಭಾವಕೊಳಪಡದಂತೆ, ಅಳತೆಗಳವಡದಂತೆ ಅಂತರ್ಗಾಮಿಯಾಗಿ ವ್ಯಾಪಿಸಿರುವ ಆ ದಿವ್ಯಶಕ್ತಿಯಾದ ಭಗವಂತನು ಸಾಕಾರ ಹಾಗೂ ನಿರಾಕಾರ ಎರಡೂ ರೂಪದಲ್ಲಿ ಅಭಿವ್ಯಕ್ತಿಗೊಳತಕ್ಕವನಾಗಿದ್ದಾನೆ. ಸರ್ವಾಂತರ್ಯಾಮಿಯಾದ ಭಗವಂತನು ನಮ್ಮೆಲ್ಲರ ಅಂತರ್ಯದ ಒಳಗೆ ನೆಲೆಗೊಂಡಿರುವ ಹಿನ್ನೆಲೆಯಲ್ಲಿ ಮೇಲುಕೀಳೆನ್ನದೆ ಸರ್ವರೂ ಸಹೋದರ ಭಾವದಿಂದ ಬದುಕನ್ನು ಸವೆಸಿ ಭ್ರಾತೃತ್ವದಿಂದ "ಸಹಕಾರ" ಜೀವನವನ್ನು ನಿರ್ವಹಿಸೋಣವೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 5,710 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 3313 ಪ್ರಕರಣಗಳು ಸೇರಿದಂತೆ ಒಟ್ಟು 9023 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 4,369 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 1,860 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 199 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 141 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1520 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 972 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 81 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 77 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 814 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

**ರಾಜ್ಯದಿಂದ ನೂತನವಾಗಿ ಆಯ್ಕೆಯಾಗಿರುವ ಸಂಸದರಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.**


ಶ್ರೀ ಭಗವಂತ ಖೂಬ
ಬೀದರ ಕ್ಷೇತ್ರ


ಶ್ರೀ ಉಮೇಶ ಜಾಧವ್
ಕಲಬುರಗಿ ಕ್ಷೇತ್ರ


ಶ್ರೀ ಅಮರೇಶ್ ನಾಯಕ
ರಾಯಚೂರು ಕ್ಷೇತ್ರ


ಶ್ರೀ ಸಂಗಣ್ಣ ಕರಡಿ
ಕೊಪ್ಪಳ ಕ್ಷೇತ್ರ


ಶ್ರೀ ದೇವೇಂದ್ರಪ್ಪ
ಬಳ್ಳಾರಿ ಕ್ಷೇತ್ರ


ಶ್ರೀ ರಮೇಶ್ ಜಿಗಜಿಣಗಿ
ವಿಜಯಪುರ ಕ್ಷೇತ್ರ


ಶ್ರೀ ಪಿ.ಸಿ.ಗದ್ದಿಗೌಡರ್
ಬಾಗಲಕೋಟೆ ಕ್ಷೇತ್ರ


ಶ್ರೀ ಅಣ್ಣಾ ಸಾಹೇಬ
ಚಿಕ್ಕೋಡಿ ಕ್ಷೇತ್ರ


ಶ್ರೀ ಸುರೇಶ್ ಅಂಗಡಿ
ಬೆಳಗಾವಿ ಕ್ಷೇತ್ರ


ಶ್ರೀ ಪ್ರಹ್ಲಾದ ಜೋಷಿ
ಧಾರವಾಡ ಕ್ಷೇತ್ರ


ಶ್ರೀ ಎಸ್ ಉದಾಸಿ
ಹಾವೇರಿ ಕ್ಷೇತ್ರ


ಶ್ರೀ ಜಿ.ಎಂ. ಸಿದ್ದೇಶ್ವರ
ದಾವಣಗೆರೆ ಕ್ಷೇತ್ರ


ಶ್ರೀ ನಾರಾಯಣಸ್ವಾಮಿ
ಚಿತ್ರದುರ್ಗ ಕ್ಷೇತ್ರ


ಶ್ರೀ ಬಿ.ವೈ.ರಾಘವೇಂದ್ರ
ಶಿವಮೊಗ್ಗ ಕ್ಷೇತ್ರ


ಶ್ರೀ ಅನಂತಕುಮಾರ
ಉತ್ತರ ಕನ್ನಡ ಕ್ಷೇತ್ರ


ಶ್ರೀ ನಳೀನ್ ಕುಮಾರ್
ದಕ್ಷಿಣ ಕನ್ನಡ ಕ್ಷೇತ್ರ


ಕು. ಶೋಭಾ ಕರಂದ್ಲಾಜೆ
ಉಡುಪಿ– ಚಿಕ್ಕಮಗ್ಳೂರು ಕ್ಷೇತ್ರ


ಶ್ರೀ ಪ್ರಜ್ವಲ್ ರೇವಣ್ಣ
ಹಾಸನ ಕ್ಷೇತ್ರ


ಶ್ರೀ ಜಿ.ಎಸ್. ಬಸವರಾಜು
ತುಮಕೂರು ಕ್ಷೇತ್ರ


ಶ್ರೀ ಬಚ್ಚೇಗೌಡ
ಚಿಕ್ಕಬಳ್ಳಾಪುರ ಕ್ಷೇತ್ರ


ಶ್ರೀ ಮುನಿಸ್ವಾಮಿ
ಕೋಲಾರ ಕ್ಷೇತ್ರ


ಶ್ರೀಮತಿ ಸುಮಾಲತಾ
ಮಂಡ್ಯ ಕ್ಷೇತ್ರ


ಶ್ರೀ ಪ್ರತಾಪ್ ಸಿಂಹ
ಮೈಸೂರು–ಕೊಡಗು ಕ್ಷೇತ್ರ


ಶ್ರೀ ಶ್ರೀನಿವಾಸ ಪ್ರಸಾದ
ಚಾಮರಾಜನಗರ ಕ್ಷೇತ್ರ




ಶ್ರೀ ಡಿ.ಕೆ. ಸುರೇಶ
ಬೆಂಗಳೂರು ಗ್ರಾಮಾಂತರ ಕ್ಷೇತ್ರ


ಶ್ರೀ ಪಿ.ಸಿ. ಮೋಹನ
ಬೆಂಗಳೂರು ಕೇಂದ್ರ ಕ್ಷೇತ್ರ


ಶ್ರೀ ತೇಜಸ್ವಿ ಸೂರ್ಯ
ಬೆಂಗಳೂರು ದಕ್ಷಿಣ ಕ್ಷೇತ್ರ


ಶ್ರೀ ಸದಾನಂದ ಗೌಡ
ಬೆಂಗಳೂರು ಉತ್ತರ ಕ್ಷೇತ್ರ



## ಕೇಂದ್ರ ಸರಕಾರದ ನೂತನ ಮಂತ್ರಿ ಮಂಡಲದ ಸಚಿವರ ಹೆಸರು ಹಾಗೂ ಖಾತೆ

| ಸಚಿವರ ಹೆಸರು | ಖಾತೆ |
|---|---|
| ಶ್ರೀ ನರೇಂದ್ರ ಮೋದಿ | ಪ್ರಧಾನಮಂತ್ರಿ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ, ಪರಮಾಣುಶಕ್ತಿ, ಬಾಹ್ಯಾಕಾಶ, ಪ್ರಮುಖ ನೀತಿ ಮತ್ತು ಇತರ ಸಚಿವರಿಗೆ ನೀಡದೆ ಉಳಿದಿರುವ ಖಾತೆಗಳು |
| ಶ್ರೀ ರಾಜನಾಥ್ ಸಿಂಗ್ | ರಕ್ಷಣೆ |
| ಶ್ರೀ ಅಮಿತ್ ಷಾ | ಗೃಹ |
| ಶ್ರೀ ನಿತಿನ್ ಗಡ್ಕರಿ | ರಸ್ತೆ ಸಾರಿಗೆ, ಹೆದ್ದಾರಿ, ಎಂಎಸ್‌ಎಂಇ |
| ಶ್ರೀ ಡಿ.ವಿ. ಸದಾನಂದಗೌಡ | ರಾಸಾಯನಿಕ ಮತ್ತು ರಸಗೊಬ್ಬರ |
| ಶ್ರೀಮತಿ ನಿರ್ಮಲಾ ಸೀತಾರಾಮನ್ | ಹಣಕಾಸು ಮತ್ತು ಕಾರ್ಪೋರೇಟ್ ವ್ಯವಹಾರ |
| ಶ್ರೀ ರಾಮ್ ವಿಲಾಸ್ ಪಾಸ್ವಾನ್ | ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ |
| ಶ್ರೀ ನರೇಂದ್ರ ಸಿಂಗ್ ತೋಮರ್ | ಕೃಷಿ, ಕೃಷಿಕ ಕಲ್ಯಾಣ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ |
| ಶ್ರೀ ರವಿಶಂಕರ್ ಪ್ರಸಾದ್ | ಕಾನೂನು ಸುವ್ಯವಸ್ಥೆ, ಸಂವಹನ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ |
| ಶ್ರೀಮತಿ ಹರ್‌ಸಿಮ್ರತ್ ಕೌರ್ ಬಾದಲ್ | ಆಹಾರ ಸಂಸ್ಕರಣಾ ಉದ್ದಿಮೆ |
| ಶ್ರೀ ತಾವರ್ ಚೌಂದ್ ಗಹ್ಲೋಟ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಶ್ರೀ ಎಸ್, ಜೈಶಂಕರ್ | ವಿದೇಶಾಂಗ |
| ಶ್ರೀ ರಮೇಶ್ ಪೋಕ್ರಿಯಾಲ್ | ಮಾನವ ಸಂಪನ್ಮೂಲ ಅಭಿವೃದ್ಧಿ |
| ಶ್ರೀ ಅರ್ಜುನ್ ಮುಂಡ | ಬುಡಕಟ್ಟು ವ್ಯವಹಾರ |
| ಶ್ರೀಮತಿ ಸ್ಮೃತಿ ಇರಾನಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಜವಳಿ |
| ಶ್ರೀ ಹರ್ಷವರ್ಧನ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಿಜ್ಞಾನ ತಂತ್ರಜ್ಞಾನ ಮತ್ತು ಭೂ ವಿಜ್ಞಾನ |
| ಶ್ರೀ ಪ್ರಕಾಶ್ ಜಾವಡೇಕರ್ | ಪರಿಸರ, ಅರಣ್ಯ, ಹವಾಮಾನ ಬದಲಾವಣೆ, ಮಾಹಿತಿ ಮತ್ತು ಪ್ರಸಾರಸಚಿವ |
| ಶ್ರೀ ಪಿಯೋಷ್ ಗೋಯಲ್ | ರೈಲ್ವೆ, ವಾಣಿಜ್ಯ ಮತ್ತು ಉದ್ಯಮ |
| ಶ್ರೀ ಧರ್ಮೇಂದ್ರ ಪ್ರಧಾನ್ | ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಉಕ್ಕು |
| ಶ್ರೀ ಮುಖ್ತಾರ್ ಅಬ್ಬಾಸ್ ನಖ್ವಿ | ಅಲ್ಪಸಂಖ್ಯಾತ ವ್ಯವಹಾರ |
| ಶ್ರೀ ಪ್ರಲ್ಹಾದ್ ಜೋಶಿ | ಸಂಸದೀಯ ವ್ಯವಹಾರ, ಕಲ್ಲಿದ್ದಲು ಮತ್ತು ಗಣಿ |
| ಶ್ರೀ ಮಹೇಂದ್ರ ನಾಥ್ ಪಾಂಡೆ | ಕೌಶಲಾಭಿವೃದ್ಧಿ ಮತ್ತು ವಾಣಿಜ್ಯೋದ್ಯಮ |
| ಶ್ರೀ ಅರವಿಂದ್ ಸಾವಂತ್ | ಬೃಹತ್ ಗಾತ್ರದ ಕೈಗಾರಿಕೆ, ಸಾರ್ವಜನಿಕ ಉದ್ಯಮ |
| ಶ್ರೀ ಗಿರಿರಾಜ್ ಸಿಂಗ್ | ಪಶುಸಂಗೋಪನೆ, ಹಾಲು ಮತ್ತು ಮೀನುಗಾರಿಕೆ |
| ಶ್ರೀ ಗಜೇಂದ್ರ ಸಿಂಗ್ ಶೇಖಾವತ್ | ಜಲಶಕ್ತಿ |

## ರಾಜ್ಯ ಸಚಿವರ ಹೆಸರು ಹಾಗೂ ಖಾತೆ

| ಹೆಸರು | ಖಾತೆ |
|---|---|
| ಶ್ರೀ ಫಗ್ಗನ್‌ಸಿಂಗ್ ಕುಲಾಸ್ತೆ | ಉಕ್ಕು |
| ಶ್ರೀ ಅಶ್ವಿನಿ ಕುಮಾರ್ ಚೌಬೆ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ |
| ಶ್ರೀ ಅರ್ಜುನ್ ರಾಮ್ ಮೇಘ್ವಾಲ್ | ಸಂಸದೀಯ ವ್ಯವಹಾರಗಳ, ಬೃಹತ್ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮ |
| ಶ್ರೀ ವಿ.ಕೆ ಸಿಂಗ್ | ರಸ್ತೆ ಸಾರಿಗೆ ಮತ್ತು ಹೆದ್ದಾರಿ |
| ಶ್ರೀ ಕೃಷನ್ ಪಾಲ್ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಶ್ರೀ ದಾನ್ವೆ ರಾವ್‌ಸಾಹೇಬ್ ದಾದಾರಾವ್ | ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ |
| ಶ್ರೀ ಜಿ.ಕಿಷನ್ ರೆಡ್ಡಿ | ಗೃಹ |
| ಶ್ರೀ ಪುರುಷೋತ್ತಮ್ ರೂಪಾಲ್ | ಕೃಷಿ ಮತ್ತು ರೈತ ಕಲ್ಯಾಣ |
| ಶ್ರೀ ರಾಮದಾಸ್ ಅಠವಳೆ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಶ್ರೀಮತಿ ಸಾಧ್ವಿ ನಿರಂಜನ್ ಜ್ಯೋತಿ | ಗ್ರಾಮೀಣಾಭಿವೃದ್ಧಿ |
| ಶ್ರೀ ಬಾಬುಲ್ ಸುಪ್ರಿಯೋ | ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ |
| ಶ್ರೀ ಸಂಜೀವ್ ಕುಮಾರ್ ಬಲ್ಯಾನ್ | ಪಶು ಸಂಗೋಪನೆ, ಹಾಲು ಮತ್ತು ಮೀನುಗಾರಿಕೆ |
| ಶ್ರೀ ಧೋತ್ರೆ ಸಂಜಯ್ ಶಾಮ್ ರಾವ್ | ಮಾನವ ಸಂಪನ್ಮೂಲ ಅಭಿವೃದ್ಧಿ, ಸಂವಹನ, ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ |
| ಶ್ರೀ ಅನುರಾಗ್ ಸಿಂಗ್ ಠಾಕೂರ್ | ಹಣಕಾಸು, ಕಾರ್ಪೋರೇಟ್ ವ್ಯವಹಾರಗಳು |
| ಶ್ರೀ ಸುರೇಶ್ ಅಂಗಡಿ | ರೈಲ್ವೆ (ರಾಜ್ಯ ಸಚಿವರು) |
| ಶ್ರೀ ನಿತ್ಯಾನಂದ ರಾಯ್ | ಗೃಹ |
| ಶ್ರೀ ರತನ್ ಲಾಲ್ ಕಟಾರಿಯ | ಜಲಶಕ್ತಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ |
| ಶ್ರೀ ವಿ.ಮುರಳೀಧರನ್ | ವಿದೇಶಾಂಗ, ಸಂಸದೀಯ ವ್ಯವಹಾರ |
| ಶ್ರೀ ರೇಣುಕಾ ಸಿಂಗ್ ಸರುತ | ಬುಡಕಟ್ಟು ವ್ಯವಹಾರ |
| ಶ್ರೀ ಸೋಮ್ ಪ್ರಕಾಶ್ | ವಾಣಿಜ್ಯ ಮತ್ತು ಕೈಗಾರಿಕೆ |
| ಶ್ರೀ ರಾಮೇಶ್ವರ್ ತೆಲಿ | ಆಹಾರ ಸಂಸ್ಕರಣೆ ಉದ್ದಿಮೆ |
| ಶ್ರೀ ಪ್ರತಾಪ್ ಚಂದ್ರ ಸಾರಂಗಿ | ಎಂಎಸ್‌ಎಂಇ, ಪಶುಸಂಗೋಪನೆ, ಹಾಲು ಮತ್ತು ಮೀನುಗಾರಿಕೆ |
| ಶ್ರೀ ಕೈಲಾಶ್ ಚೌಧರಿ | ಕೃಷಿ ಮತ್ತು ರೈತ ಕಲ್ಯಾಣ (ರಾಜ್ಯ ಸಚಿವರು) |
| ಶ್ರೀ ಸುಶ್ರಿ ದೇಬಶ್ರಿ ಚೌಧುರಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ |

## ಜೂನ್ 17 ರಿಂದ ಸಂಸತ್ ಅಧಿವೇಶನ

- ಜುಲೈ 26ರವರೆಗೆ ಮೊದಲ ಅಧಿವೇಶನ
- ಜೂನ್ 19ಕ್ಕೆ ಸ್ಪೀಕರ್ ಆಯ್ಕೆ
- ಜೂನ್ 20 ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿಗಳ ಭಾಷಣ
- ಜುಲೈ 4 ಆರ್ಥಿಕ ಸಮೀಕ್ಷೆ ಮಂಡನೆ
- ಜುಲೈ 5ಕ್ಕೆ ಬಜೆಟ್ ಮಂಡನೆ

## ದಿನಾಂಕ 15 ಮೇ 2019 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಹಾಗೂ ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ "ಯುವಜನ ಮತ್ತು ಸಹಕಾರ" ಸಂವಾದ ಕಾರ್ಯಕ್ರಮ



### ಸಹಕಾರ ಕ್ಷೇತ್ರದಿಂದ ಜೀವನ ರೂಪಿಸಲು ಸಾಧ್ಯ – ಶ್ರೀ ವೇಣುಗೋಪಾಲ್ ಕೆ.ಆರ್, ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.



**ಬೆಂಗಳೂರು:** ಸೌಹಾರ್ದ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಒಟ್ಟಾರೆ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಹಕಾರ ವಿಷಯ ಕುರಿತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸುವ ಉದ್ದೇಶವನ್ನು ಸಂಯುಕ್ತ ಸಹಕಾರಿಯು ಹೊಂದಿದೆ. ಈ ಹಿನ್ನೆಲೆಯಲ್ಲಿ ದಿನಾಂಕ 15 ಮೇ 2019ರಂದು ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರ ಸಂಯುಕ್ತ ಆಶ್ರಯದಲ್ಲಿ "ಯುವಜನ ಮತ್ತು ಸಹಕಾರ" ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇವರು ವಹಿಸಿಕೊಂಡಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರೊ. ವೇಣುಗೋಪಾಲ್ .ಕೆ.ಆರ್. ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರೊ.ಬಿ.ಕೆ.ರೆಡ್ಡಿ, ಮಾನ್ಯ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಶ್ರೀ ಸತೀಶ್ಚಂದ್ರ, ಮಾನ್ಯ ಅಧ್ಯಕ್ಷರು, ಕ್ಯಾಂಪ್ಕೋ ಮಂಗಳೂರು, ಶ್ರೀ. ವಸಂತನಾಯಕ್, ಮಾನ್ಯ ಸಿಂಡಿಕೇಟ್ ಸದಸ್ಯರು, ಬೆಂಗಳೂರು ವಿಶ್ವವಿದ್ಯಾಲಯ, ಶ್ರೀ.ಬಿ.ಶಿವಣ್ಣ, ಮಾನ್ಯ ಸಿಂಡಿಕೇಟ್ ಸದಸ್ಯರು, ಬೆಂಗಳೂರು ವಿಶ್ವವಿದ್ಯಾಲಯ, ಡಾ.ಆರ್.ಶಶಿಕುಮಾರ್, ಮಾನ್ಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ಡಿ.ಹನುಮಂತಯ್ಯ, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಬೆಂಗಳೂರು, ಹಾಗೂ ಶ್ರೀ. ಬಿ.ಎಸ್.ಗುಂಡುರಾವ್, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಮತ್ತು ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು, ಇವರುಗಳು ಭಾಗವಹಿಸಿದ್ದರು.

ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯ ಅತಿಥಿಗಳು ನೆರವೇರಿಸಿಕೊಟ್ಟರು. ನಂತರ ಉದ್ಘಾಟನಾ ಭಾಷಣವನ್ನು ಪ್ರೊ. ವೇಣುಗೋಪಾಲ್.ಕೆ.ಆರ್. ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಇವರು ನೆರವೇರಿಸಿಕೊಟ್ಟರು. ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಿರುವ ಈ ಸಂವಾದ ಕಾರ್ಯಕ್ರಮವು ಯುವಕರಿಗೆ, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಸಹಕಾರ ಕ್ಷೇತ್ರದ ಬಗ್ಗೆ ಆಶಯ, ಉದ್ದೇಶಗಳ ಬಗ್ಗೆ ತಿಳಿಸಿಕೊಡುತ್ತದೆ ಎಂದು ತಿಳಿಸಿದರು. ಸಹಕಾರ ಕ್ಷೇತ್ರದಿಂದಲ್ಲೂ ಸಹ ಜೀವನ ರೂಪಿಸಿಕೊಳ್ಳಲು ಸಾಧ್ಯ ಎನ್ನುವ ಬಗ್ಗೆ ವಿದ್ಯಾರ್ಥಿಗಳಲ್ಲಿ ತಿಳುವಳಿಕೆ ಬರುತ್ತದೆ ಎಂದು ತಿಳಿಸಿದರು. ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಸಹಕಾರಿ ಕ್ಷೇತ್ರವನ್ನು ಪರಿಚಯಿಸುವ ಅಧ್ಯಯನ ಸಾಹಿತ್ಯವನ್ನು ಸಂಯುಕ್ತ ಸಹಕಾರಿ ವತಿಯಿಂದ ವಿತರಿಸಿದ್ದು ಈ ಅಧ್ಯಯನ ಸಾಹಿತ್ಯವು ಸಹಕಾರಿ ಕ್ಷೇತ್ರದ ಸಂಪೂರ್ಣ ವಿಷಯಗಳನ್ನು ತಿಳಿಸಿಕೊಡುತ್ತದೆ ಎಂದು ತಿಳಿಸಿದರು. ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿರುವ ಬಗ್ಗೆ ಸಂತೋಷವನ್ನು ವ್ಯಕ್ತ ಪಡಿಸಿದರು.

## ಸಹಕಾರ ಕ್ಷೇತ್ರದ ಬಗ್ಗೆ ಅಧ್ಯಯನ ಪೀಠ ಪ್ರಾರಂಭಿಸಲು ಪ್ರಸ್ತಾವನೆ – ಶ್ರೀ.ಬಿ.ಕೆ.ರವಿ, ಮಾನ್ಯ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.



ಕಾರ್ಯಕ್ರಮದಲ್ಲಿ ಶ್ರೀ ಸತೀಶ್ಚಂದ್ರ, ಮಾನ್ಯ ಅಧ್ಯಕ್ಷರು, ಕ್ಯಾಂಪ್ಕೋ ಮಂಗಳೂರು, ಇವರು ಸಹಕಾರ ಕ್ಷೇತ್ರದ ಬಗ್ಗೆ ಯುವಕರಿಗೆ ತಿಳಿಸಿಕೊಟ್ಟರು, ನಂತರ ಪ್ರೊ.ಬಿ.ಕೆ.ರವಿ, ಮಾನ್ಯ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ಇವರು ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಿರುವ ಸಂವಾದ ಕಾರ್ಯಕ್ರಮದ ಬಗ್ಗೆ ತಿಳಿಸಿಕೊಟ್ಟರು, ಅಲ್ಲದೆ ಸಂಯುಕ್ತ ಸಹಕಾರಿ ವತಿಯಿಂದ ನೂತನವಾಗಿ ಆಯೋಜಿಸಿರುವ ಡಿಸಿಬಿಎಂ ಕೋರ್ಸ್‌ನ ಹಾಗೂ ಅದರ ಅಧ್ಯಯನ ಸಾಹಿತ್ಯದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ನಿರಂತರವಾಗಿ ಅಧ್ಯಯನ ಹಮ್ಮಿಕೊಳ್ಳುವುದಕ್ಕಾಗಿ ಸಹಕಾರ ಅಧ್ಯಯನ ಪೀಠಕ್ಕೆ ಸ್ಥಾಪನೆಗೆ ಪ್ರಸ್ತಾಪಿಸಿದರು.

ಸಂವಾದ ಕಾರ್ಯಕ್ರಮದ ಪ್ರಧಾನ ವಿಷಯ ಅಧಿವೇಶನದ ಅಧ್ಯಕ್ಷತೆಯನ್ನು ಪ್ರೊ.ಬಿ.ಕೆ.ರವಿ, ಮಾನ್ಯ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, ಇವರು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದ ಪ್ರಧಾನ ವಿಷಯ ಮಂಡನೆಯನ್ನು ಡಾ.ಎಸ್.ಎ.ಸಿದ್ಧಾಂತಿ, ಮಾನ್ಯ ನಿರ್ದೇಶಕರು, ಆರ್.ಐ.ಸಿ.ಎಂ., ಬೆಂಗಳೂರು ಇವರು ನಡೆಸಿಕೊಟ್ಟರು. ಈ ಸಮಯದಲ್ಲಿ ಸಹಕಾರ ಕ್ಷೇತ್ರದ ಸಾಧನೆಗಳು, ಸವಾಲುಗಳು, ಅವಕಾಶಗಳು ಹಾಗೂ ಸಹಕಾರ ಕ್ಷೇತ್ರದಲ್ಲಿ ಯುವಜನರ ಪಾತ್ರವೇನು ಎಂಬುದನ್ನು ಹಲವು ಉದಾಹಣೆಗಳ ಮೂಲಕ ತಿಳಿಸಿಕೊಟ್ಟರು.

ನಂತರದಲ್ಲಿ ಸಂವಾದ ಕಾರ್ಯಕ್ರಮಕ್ಕೆ, ಸಂಪನ್ಮೂಲ ವ್ಯಕ್ತಿಗಳಾಗಿ, ಡಾ. ಆರ್.ಶಶಿಕುಮಾರ್, ಮಾನ್ಯ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಶ್ರೀ ಎಂ.ಡಿ. ನರಸಿಂಹಮೂರ್ತಿ, ಮಾನ್ಯ ಸಹಕಾರ ಸಂಘಗಳ ಜಂಟಿ ನಿಬಂಧಕರು, ಸಹಕಾರ ಇಲಾಖೆ, ಬೆಂಗಳೂರು, ಶ್ರೀ ಎಂ. ರುದ್ರಮೂರ್ತಿ, ಮಾನ್ಯ ಪ್ರಾಂಶುಪಾಲರು, ಅಪೆಕ್ಸ್ ಬ್ಯಾಂಕ್ ಸಿಬ್ಬಂದಿ ತರಬೇತಿ ಸಂಸ್ಥೆ, ಬೆಂಗಳೂರು, ಶ್ರೀಮತಿ ಹೆಚ್.ಜಿ.ಶೋಭಾ, ಮಾನ್ಯ ಸಂಪಾದಕರು, ಸ್ತ್ರೀ ಜಾಗೃತಿ ಮಾಸಪತ್ರಿಕೆ, ಬೆಂಗಳೂರು, ಶ್ರೀ ಎಸ್, ಚಂದ್ರಶೇಖರ್, ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, 2ನೇ ವಲಯ, ಬೆಂಗಳೂರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಭಾಗವಹಿಸಿದ್ದರು. ಈ ಎಲ್ಲಾ ಅತಿಥಿ ಗಣ್ಯರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸಹಕಾರ ಬಗ್ಗೆ ಕೇಳಿದ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು.

ನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಅತಿಥಿ ಗಣ್ಯರನ್ನು ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ.ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಯುವಕರಿಗೆ ಮಾಹಿತಿ ನೀಡುವ ಈ ಸಂವಾದ ಕಾರ್ಯಕ್ರಮ ಉತ್ತಮವಾಗಿ ನಡೆದಿದೆ. ಈ ಅವಕಾಶವನ್ನು ಸಂಯುಕ್ತ ಸಹಕಾರಿಗೆ ಮಾಡಿಕೊಟ್ಟಿರುವ ಬೆಂಗಳೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಿಗೆ, ಕುಲಸಚಿವರಿಗೆ ಹಾಗೂ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಎಲ್ಲರಿಗೂ ಸಂಯುಕ್ತ ಸಹಕಾರಿಯ ಕೃತಜ್ಞತೆಯನ್ನು ಸಲ್ಲಿಸುತ್ತದೆ. ವಿಶೇಷವಾಗಿ ಸಂವಾದ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರನ್ನು ಅಭಿನಂದಿಸಿದರು.

ಕಾರ್ಯಕ್ರಮದ ವಂದನಾರ್ಪಣೆಯನ್ನು ಬೆಂಗಳೂರು ಪ್ರಾಂತಿಯ ಕಛೇರಿಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆಯವರು ನೇರವೇರಿಸಿಕೊಟ್ಟರು.

ಈ ಕಾರ್ಯಕ್ರಮದಲ್ಲಿ ಒಟ್ಟು 200 ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು, ಅಲ್ಲದೆ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಅಧ್ಯಾಪಕರುಗಳು ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಅಧ್ಯಯನಕ್ಕೆ ನೇಪಾಳದ ಸಹಕಾರಿ ತಂಡದ ಭೇಟಿ



**ಬೆಂಗಳೂರು:** ಸಂಯುಕ್ತ ಸಹಕಾರಿಯ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್ ಸಾಹಿತ್ಯವನ್ನು ಅಧ್ಯಯನ ಮಾಡಲು ಶ್ರೀಮತಿ ಓಂದೇವಿಮಲ್ಲಾ, ಮಾನ್ಯ ನೇಪಾಳದ ರಾಷ್ಟ್ರೀಯ ಸಹಕಾರ ಸಂಘ ಮತ್ತು ಐಸಿಎ ಗ್ಲೋಬಲ್ ಬೋರ್ಡ್‌ನ ಸದಸ್ಯರು, ಪ್ರೊ. ಡಾ. ದಿಲ್ಲಿ ರಾಜ್ ಶರ್ಮಾ, ಮಾನ್ಯ ಮುಖ್ಯಸ್ಥರು, ತ್ರಿಬುವನ್ ವಿಶ್ವವಿದ್ಯಾಲಯ, ಕೃತಿಪುರ್, ನೇಪಾಳ, ಶ್ರೀ ದೀಪಕ್ ಖಾಡ್ಕ್, ಮಾನ್ಯ ಕಾರ್ಯದರ್ಶಿ ಭೂ ನಿರ್ವಹಣಾ ಸಚಿವಾಲಯ, ಸಹಕಾರ ಮತ್ತು ಬಡತನ ನಿರ್ಮೂಲನೆ, ಶ್ರೀ ಖಿಲಾ ನೇಷನ್ ಧಮಾಳ, ಮಾನ್ಯ ಪಠ್ಯಕ್ರಮ ಅಧಿಕಾರಿ, ಪಠ್ಯಕ್ರಮ ಅಭಿವೃದ್ಧಿ ಕೇಂದ್ರ ನೇಪಾಳ, ಹಾಗೂ ಮೈಸೂರು ವಿಶ್ವವಿದ್ಯಾಲಯದ ಪ್ರೊ. ಯಶವಂತ ಡೋಂಗ್ರೆರವರ ನೇತೃತ್ವದಲ್ಲಿ ದಿನಾಂಕ 23ನೇ ಮೇ 2019ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ ವಿಷಯದ ಪಟ್ಟಿಯನ್ನು ಅಧ್ಯಯನ ಮಾಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ, ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ಹಾಗೂ ಸಂಯುಕ್ತ ಸಹಕಾರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆ ತೃಪ್ತಿದಾಯಕ – ಶ್ರೀ ಜಮಾಂಗ್



**ಬೆಂಗಳೂರು:** ದಿನಾಂಕ 30 ಮೇ 2019ರಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಪ್ರಾಂತೀಯ ವಿಭಾಗದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಮುಖ್ಯಸ್ಥರಾದ ಶ್ರೀ ಜಮಾಂಗ್ ಇವರ ಅಧ್ಯಕ್ಷತೆಯಲ್ಲಿ ಹಾಗೂ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳ ಉಪಸ್ಥಿಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್.ಕೃಷ್ಣಾರೆಡ್ಡಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ, ನಿರ್ದೇಶಕರುಗಳಾದ ಶ್ರೀ ವಿಶ್ವನಾಥ ಹಿರೇಮಠ, ಶ್ರೀ ನಂಜನಗೌಡ, ಶ್ರೀ ತಿಮ್ಮಯ್ಯಶೆಟ್ಟಿ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಇವರು ಸಭೆಯಲ್ಲಿ ಭಾಗವಹಿಸಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಿದರು.

ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕುಗಳ ಮುಖ್ಯಸ್ಥರಾದ ಶ್ರೀ ಜಮಾಂಗ್‌ರವರು ಮಾತನಾಡಿ, ಸೌಹಾರ್ದ ಕ್ಷೇತ್ರದ ಎಲ್ಲಾ ಪಟ್ಟಣ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಒಂದೆರಡು ಬ್ಯಾಂಕುಗಳಲ್ಲಿ ಎನ್‌ಪಿಎ ಪ್ರಮಾಣ ಜಾಸ್ತಿ ಇದೆ, ಅದನ್ನು ಕಡಿಮೆ ಮಾಡಲು ಕ್ರಮವಿಡಬೇಕು ಎಂದು ತಿಳಿಸಿದರು. ಈ ದೇಶದಲ್ಲಿ 12 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಅವ್ಯವಹಾರ ಹಾಗೂ ದುರುಪಯೋಗವಾಗಿರುವುದು ಗಮನಕ್ಕೆ ಬಂದಿದೆ. ಇದರಲ್ಲಿ ಹೆಚ್ಚಿನ ಅಂಶ ಸೈಬರ್ ಸೆಕ್ಯೂರಿಟಿ ವ್ಯವಸ್ಥೆ ಸರಿ ಇಲ್ಲದೇ ಇರುವುದ–ರಿಂದ ಈ ರೀತಿ ಅವ್ಯವಹಾರಗಳು ಆಗಿರುತ್ತದೆ, ಎಲ್ಲಾ ಬ್ಯಾಂಕುಗಳು ಕಡ್ಡಾಯವಾಗಿ ಸೆಟ್ಯೂರಿಟಿ ಸಿಸ್ಟಂ ವ್ಯವಸ್ಥೆಯನ್ನು ಅಳವಡಿಸುವ ಕ್ರಮವಿಡಬೇಕು ಮತ್ತು ಫೈರ್‌ವಾಲ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಸಿಬಿಎಸ್ ಸಾಫ್ಟ್‌ವೇರ್ ವ್ಯವಸ್ಥೆಯ ಬಗ್ಗೆ ಹೆಚ್ಚಿನ ಬ್ಯಾಂಕುಗಳು ವೆಂಡಾರ್‌ಗಳ ಮೇಲೆ ಅವಲಂಭಿತವಾಗಿರುವುದು ಕಂಡುಬಂದಿದೆ. ಈ ನಿಟ್ಟಿನಲ್ಲಿ ಸಿಬ್ಬಂದಿಗಳಿಗೆ ಹೆಚ್ಚಿನ ತರಬೇತಿಯನ್ನು ನೀಡುವ ವ್ಯವಸ್ಥೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳು ಮಾಡಬೇಕು ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಮಾತನಾಡಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಹಾಗೂ ಬೇರೆ ಕ್ರೆಡಿಟ್ ಸೊಸೈಟಿಗಳಿಗೆ ಆಕ್ಸಿಸ್ ಬ್ಯಾಂಕ್‌ನವರು ಚಾಲ್ತಿ ಖಾತೆ ಹಾಗೂ ಉಳಿತಾಯ ಖಾತೆಗಳನ್ನು ಕ್ಲೋಸ್ ಮಾಡಲು ತಿಳಿಸಿದ್ದಾರೆ. ಇದರಿಂದಾಗಿ ನಮ್ಮ ಸೌಹಾರ್ದ ಸಹಕಾರಿಗಳಿಗೆ ಆಕ್ಸಿಸ್ ಬ್ಯಾಂಕ್ ವ್ಯವಹಾರಗಳನ್ನು ಮಾಡುವುದು ಕಷ್ಟವಾಗಿದೆ. ಈ ರೀತಿ ಏಕಾಏಕಿ ಆಕ್ಸಿಸ್ ಬ್ಯಾಂಕ್‌ನವರು ಕ್ರಮತೆಗೆದುಕೊಂಡಿರುವುದು ಸಾಧುವಲ್ಲ. ಸೌಹಾರ್ದ ಸಹಕಾರಿ, ಮತ್ತು ಕ್ರೆಡಿಟ್ ಸೊಸೈಟಿಗಳು ಹಲವಾರು ವರ್ಷಗಳಿಂದ ನಡೆಸಿಕೊಂಡು ಬಂದ ಆಕ್ಸಿಸ್ ಬ್ಯಾಂಕಿನ ವ್ಯವಹಾರ ನಿಲ್ಲಿಸಿರುವುದಕ್ಕೆ ಯಾವುದೇ ಕಾರಣ ನೀಡಿರುವುದಿಲ್ಲ. ಈ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾರವರು ಆಕ್ಸಿಸ್ ಬ್ಯಾಂಕ್‌ರವರೊಂದಿಗೆ ವ್ಯವಹರಿಸಿ ಈ ಸಮಸ್ಯೆ ಬಗೆಹರಿಸಲು ಕೋರಿದರು. ಈ ವಿಷಯದ ಬಗ್ಗೆ ಸಂಬಂದಿಸಿದಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕೇಂದ್ರ ಕಛೇರಿಯೊಂದಿಗೆ ವ್ಯವಹರಿಸಿ ಕ್ರಮವಿಡಲಾಗುವುದೆಂದು ತಿಳಿಸಿದರು.

## ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪತ್ರಗಳ ಸಿದ್ಧತೆ ಹಾಗೂ ಅನಿಯಂತ್ರಿತ ಠೇವಣಿ ನಿಷೇಧ ಕುರಿತು ತರಬೇತಿ ಕಾರ್ಯಕ್ರಮ



**ಮೈಸೂರು:** ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗಾಗಿ ಹಣಕಾಸು ನಿರ್ವಹಣೆ, ಆರ್ಥಿಕ ತಃಖ್ತೆಗಳ ವಿಶ್ಲೇಷಣೆ, ಲೆಕ್ಕಪತ್ರಗಳ ಸಿದ್ಧತೆ ಹಾಗೂ ಅನಿಯಂತ್ರಿತ ಠೇವಣಿ ನಿಷೇಧ ಕುರಿತು ತರಬೇತಿ ಕಾರ್ಯಕ್ರಮವನ್ನು ದಿನಾಂಕ: 28 ಮೇ 2019 ಮಂಗಳವಾರದಂದು ಬೆಳಿಗ್ಗೆ 10.30 ಗಂಟೆಗೆ ಹೋಟೆಲ್ ಮಯೂರ ಹೊಯ್ಸಳ, ಜೆಎಲ್‌ಬಿ ರಸ್ತೆ, ರೈಲ್ವೆ ನಿಲ್ದಾಣದ ಹತ್ತಿರ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಮಾನ್ಯ ಉಪನಿರ್ದೇಶಕರಾದ ಶ್ರೀ ಜನಾರ್ಧನ್‌ರವರು ಉದ್ಘಾಟಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಾರಾಯಣ ರಾವ್‌ರವರು, ಮಾನ್ಯ ಲೆಕ್ಕಪರಿಶೋಧಕರಾದ ಶ್ರೀ ಬಿ.ಎನ್. ಚಂದ್ರಶೇಖರ್‌ರವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆರವರು, ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 35 ಸೌಹಾರ್ದ ಸಹಕಾರಿಗಳಿಂದ 40 ಪ್ರತಿನಿಧಿಗಳು ಭಾಗವಹಿಸಿದ್ದರು.

## "ಪ್ರವೇಶ ತರಬೇತಿ" ಕಾರ್ಯಕ್ರಮ





**ಬೆಂಗಳೂರು:** ದಿನಾಂಕ 30.05.2019 ರಂದು ಬೆಂಗಳೂರು ಪ್ರಾಂತದ ಹೊಸ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮವನ್ನು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ ಬೆಂಗಳೂರು, ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಎಸ್ ಗುಂಡೂರಾವ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರು ಪ್ರಾಂತದ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸಂಜಯ ಕೋರಟಕರ, ಕಾನೂನು ಅಧಿಕಾರಿಗಳು, ಶ್ರೀ ರಾಜೇಶ ಕೆ, ಎಂ, ಜಿಲ್ಲಾ ಸಂಯೋಜಕರು, ಶ್ರೀಮತಿ ಶೋಭಾ ಆರ್, ಸಹ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ಹಾಗೂ ಶೈಲಜಾ ಎಸ್, ಸಹಾಯಕಿ, ಬೆಂಗಳೂರು ಪ್ರಾಂತ ಇವರು ಭಾಗವಹಿಸಿದ್ದರು, ಕಾರ್ಯಕ್ರಮದಲ್ಲಿ 73 ಸೌಹಾರ್ದ ಸಹಕಾರಿಗಳಿಂದ 53 ಪ್ರತಿನಿಧಿಗಳು ಭಾಗವಹಿಸಿದ್ದರು.

**ದಾವಣಗೆರೆ:** ದಿನಾಂಕ 29.05.2019 ರಂದು ದಾವಣಗೆರೆ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಚಿತ್ರದುರ್ಗ, ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳ ಹೊಸ ಸೌಹಾರ್ದ ಸಹಕಾರಿಗಳಿಗಾಗಿ "ಪ್ರವೇಶ ತರಬೇತಿ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸದರಿ ತರಬೇತಿಯಲ್ಲಿ ಸಂಯುಕ್ತ ಸಹಕಾರಿಯ ಶಿವಮೊಗ್ಗ ಜಿಲ್ಲಾ ನಿರ್ದೇಶಕರಾದ ಶ್ರೀ ಎ, ಆರ್ ಪ್ರಸನ್ನಕುಮಾರ್, ದಾವಣಗೆರೆ ಜಿಲ್ಲಾ ಸೌಹಾರ್ದ ಒಕ್ಕೂಟದ ಮುಖ್ಯ ಪ್ರವರ್ತಕರಾದ ಶ್ರೀ ಎಂ, ನಾಗರಾಜ್ ಮತ್ತು ಕರಾವಳಿ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಉಮೇಶ್ ಶೆಟ್ಟಿ ರವರು ಭಾಗವಹಿಸಿದ್ದರು. ಬೆಂಗಳೂರು ಪ್ರಾಂತದ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಮತ್ತು ಶ್ರೀ ಶಶಿಕುಮಾರ್ ರವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು.

## "ಕ್ಲಸ್ಟರ್ ತರಬೇತಿ" ಕಾರ್ಯಕ್ರಮ






**ತುಮಕೂರು:** ದಿನಾಂಕ: 15.05.2019ರಂದು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ನಡೆದ ಚುನಾವಣಾ ಪೂರ್ವ ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಬೆಂಗಳೂರು ಪ್ರಾಂತದ ಕಾನೂನು ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರ ರವರು ಅಧ್ಯಕ್ಷತೆ ವಹಿಸಿ ಮಾಹಿತಿ ನೀಡಿದರು ಹಾಗೂ ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ್ ರವರು ಉಪಸ್ಥಿತರಿದ್ದರು, ಕಾರ್ಯಕ್ರಮದಲ್ಲಿ 08 ಸೌಹಾರ್ದ ಸಹಕಾರಿಗಳಿಂದ 10 ಸದಸ್ಯರು ಭಾಗವಹಿಸಿದ್ದರು.

**ಶಿವಮೊಗ್ಗ:** ದಿನಾಂಕ 25.05.2019 ರಂದು ಶಿಕಾರಿಪುರ ಮತ್ತು ಸೊರಬ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಮುಖ್ಯಕಾರ್ಯನಿರ್ವಾಹಕರ ಶಾಸನಾತ್ಮಕ ಜವಬ್ದಾರಿ" ಕುರಿತು ಕ್ಲಸ್ಟರ್ ತರಬೇತಿಯನ್ನು ಶಿಕಾರಿಪುರ ಬಸವೇಶ್ವರ ಸೌಹಾರ್ದ ಸಹಕಾರಿ ನಿ., ಶಿಕಾರಿಪುರ. ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 08 ಸೌಹಾರ್ದ ಸಹಕಾರಿಗಳಿಂದ 12 ಜನರು ಭಾಗವಹಿಸಿದ್ದರು.

## ಶ್ರೀ ಸಾಯಿ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗಾಗಿ ಎರಡು ದಿನದ ವಿಶೇಷ ತರಬೇತಿ ಕಾರ್ಯಕ್ರಮ



**ಬೆಳಗಾವಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಬೆಳಗಾವಿ ಇದರ ಸಹಯೋಗದಲ್ಲಿ ದಿನಾಂಕ 25 ಮತ್ತು 26 ಮೇ 2019 ರಂದು ಕನ್ನಡ ಸಾಹಿತ್ಯ ಭವನ, ಬೆಳಗಾವಿ, ಇಲ್ಲಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ, ಇದರ ಸಿಬ್ಬಂದಿಗಳಿಗಾಗಿ ಎರಡು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಉಪಾಧ್ಯಕ್ಷರು ಕೆ.ಡಿ.ಸಿ.ಸಿ. ಬ್ಯಾಂಕ್ ಹಾಗೂ ಶ್ರೀ ಎಸ್. ಜಿ.ಕುಲಕರ್ಣಿ, ಮಾನ್ಯ ಸಹಕಾರ ಹಾಗೂ ಬ್ಯಾಂಕಿಂಗ್ ತರಬೇತಿದಾರರು, ಬೆಂಗಳೂರು, ಇವರು ನಡೆಸಿಕೊಟ್ಟರು. ಶ್ರೀ ವಿ.ಜೆ ಕಾರಕೂನ, ಮಾನ್ಯ ಹಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ಬೆಂಗಳೂರು ಹಾಗೂ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಳಗಾವಿ., ಇವರು ಭಾಗವಹಿಸಿದ್ದರು.

ಕಾರ್ಯಕ್ರಮವು ಶ್ರೀ ಮಹದೇವ ಮಟ್ಟಿಗಲ್ಲಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಸ್ವಾಗತವನ್ನು ಶ್ರೀ ವಿ.ಜೆ ಕಾರಕೂನರವರು ನಡೆಸಿಕೊಟ್ಟರು ಹಾಗೂ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀ ಶ್ರೀಕಾಂತ ಬರುವೆ, ಇವರು ಸಹಕಾರಿಯ ಆಡಳಿತ ನಿರ್ವಹಣೆಯಲ್ಲಿ ಎಲ್ಲಾ ಸಿಬ್ಬಂದಿಗಳಿಗೂ ಅಗತ್ಯವಿರುವ ಸಹಕಾರಿಯ ಸಾಮಾನ್ಯ ವಿಷಯಗಳ ಕುರಿತು ಉಪನ್ಯಾಸಗಳನ್ನು ಅಳವಡಿಸಲಾಗಿರುತ್ತದೆ. ಹಾಗಾಗಿ ಸಿಬ್ಬಂದಿಗಳು ಇದರ ಸದುಪಯೋಗ ಪಡೆಯಬೇಕೆಂದು ಹೇಳಿದರು.

ಮೊದಲನೆಯ ದಿನ ದಿನಾಂಕ 25 ಮೇ 2019 ರಂದು ಶ್ರೀ ಭಾಸ್ಕರ ಹೆಗಡೆ ಕಾಗೇರಿಯವರು, ಸಹಕಾರಿ ಕ್ಷೇತ್ರದ ಪರಿಚಯ, ಸಿಬ್ಬಂದಿಗಳ ಕಾರ್ಯನಿರ್ವಹಣೆ, ವೃತ್ತಿ ಸಂಸ್ಕೃತಿ, ಶ್ರೀ ಎಸ್.ಜಿ.ಕುಲಕರ್ಣಿಯವರು ಆಧುನಿಕ ತಂತ್ರಜ್ಞಾನದ ಅಳವಡಿಕೆ, ಅಂತರ್ಜಾಲ ಮಾಹಿತಿ ಹಾಗೂ ಡಾ॥ ನಂದೀಶ ಹಿರೇಮಠರವರು ಗ್ರಾಹಕ ಸೇವೆಗಳ ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು.

ಎರಡನೇಯ ದಿನ ದಿನಾಂಕ 26 ಮೇ 2019 ರಂದು ಶ್ರೀ ಎಸ್.ಜಿ.ಜೋಶಿ, ಮಾನ್ಯ ವಕೀಲರು ಹಾಗೂ ಸಹಕಾರ ಸಂಘಗಳ ನಿವೃತ್ತ ಸಹಾಯಕ ನಿಬಂಧಕರು, ಇವರು ಕಡತಗಳ ನಿರ್ವಹಣೆ, ಸಾಲ ಪತ್ರಗಳ ನಿರ್ವಹಣೆ ಹಾಗೂ ದಾವಾ ದಾಖಲಾತಿ ಕ್ರಮಗಳು. ಶ್ರೀ ಎಸ್.ಜಿ.ಕುಲಕರ್ಣಿ, ಇವರು ಪಾವತಿ ವಿಧಾನಗಳು, ಇಸಿಎಸ್/ಆರ್‌ಟಿಜಿಎಸ್/ಎನ್‌ಇಎಫ್‌ಟಿ/ವ್ಯಾಲೆಟ್/ಪ್ಲಾಸ್ಟಿಕ್‌ಮನಿ/ಸಿಟಿಎಸ್/ಎಂಐಸಿಆರ್, ಶ್ರೀ ವೈ.ವಿ.ಗುಂಡುರಾವ್, ಮಾನ್ಯ ಸಹಪ್ರಧಾನ ವ್ಯವಸ್ಥಾಪಕ(ನಿ), ನಬಾರ್ಡ್ ಬೆಂಗಳೂರು, ಇವರು ಸಮಯ ನಿರ್ವಹಣೆ, ಪರಿಣಾಮಕಾರಿ ಸಂವಹನ,, ಅಧಿಪ್ರೇರಣೆ, ಸ್ಮಾರ್ಟ್ ಸ್ಕಿಲ್ಸ್ ಹಾಗೂ ನಿಮ್ಮ ಗ್ರಾಹಕರನ್ನು ನೀವು ತಿಳಿಯಿರಿ(ಕೆ.ವೈ.ಸಿ), ವಿಷಯಗಳ ಕುರಿತು ಉಪನ್ಯಾಸ ನೀಡಿದರು.

## ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ತರಬೇತಿ ಕಾರ್ಯಕ್ರಮಗಳು



**ಉತ್ತರ ಕನ್ನಡ:** ದಿನಾಂಕ 18.05.2019 ರಂದು ಉತ್ತರ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಟಿ.ಎಮ್.ಸಿ. ಸಭಾಭವನ ಶಿರಸಿ. ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀಮತಿ ಸರಸ್ವತಿ ಎನ್ ರವಿ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಮಾನ್ಯ ಉಪಾಧ್ಯಕ್ಷರು ಕೆ.ಡಿ.ಸಿ.ಸಿ. ಬ್ಯಾಂಕ್ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಎಸ್.ಜಿ.ಜೋಷಿ, ನಿವೃತ್ತ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಧಾರವಾಡ ಹಾಗೂ ಶ್ರೀ ರಾಚಯ್ಯ ಹಿರೇಮಠರವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 70 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ವಿಷಯದ ಕುರಿತು ಶ್ರೀ ಎಸ್.ಜಿ.ಜೋಷಿ ಮತ್ತು ಶ್ರೀ ರಾಚಯ್ಯ ಹಿರೇಮಠ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಭಾಸ್ಕರ ಹೆಗಡೆ ಕಾಗೇರಿ. ಇವರು ಉಪನ್ಯಾಸ ನೀಡಿದರು.



**ಗದಗ:** ದಿನಾಂಕ 21.05.2019 ರಂದು ಗದಗ ಜಿಲ್ಲೆಗಳಲ್ಲಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಐ.ಎಂ.ಎ. ಸಭಾ ಭವನ, ಗದಗ. ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಆರ್.ಎನ್.ದೇಶಪಾಂಡೆ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಎ.ಎಂ.ಗೌಡರ, ಮಾನ್ಯ ಅಧ್ಯಕ್ಷರು ಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ.,ಗದಗ. ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್.ಹೆಚ್.ಮಾರನಬಸರಿ, ಮಾನ್ಯ ಸಹಕಾರಿ ಸಂಘಗಳ ನಿರೀಕ್ಷಕರು, ಗದಗ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಾಚಯ್ಯ ಹಿರೇಮಠರವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 41 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ವಿಷಯದ ಕುರಿತು ಶ್ರೀ ರಾಚಯ್ಯ ಹಿರೇಮಠ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ವಿ.ಜಿ.ಕುಲಕರ್ಣಿ, ಮಾನ್ಯ ನಿವೃತ್ತ ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಧಾರವಾಡ, ಇವರು ಉಪನ್ಯಾಸ ನೀಡಿದರು.



**ಹಾವೇರಿ:** ದಿನಾಂಕ 22.05.2019 ರಂದು ಹಾವೇರಿ ಜಿಲ್ಲೆಗಳಲ್ಲಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಗ್ರೀನ್ ಕೋರ್ಟ, ಸಭಾ ಭವನ, ಹಾವೇರಿ, ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಎಂ.ಬಿ.ಕಲಾಲ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಎಸ್.ಜಿ.ಜೋಷಿ, ಮಾನ್ಯ ವಕೀಲರು ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹುಬ್ಬಳ್ಳಿ ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಎನ್.ಎಸ್ ಕುಮ್ಮೂರು, ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾವೇರಿ ಹಾಗೂ ಶ್ರೀ ಸಂತೋಷ ಮಡಳ್ಳಿ, ಮಾನ್ಯ ಪ್ರಥಮ ದರ್ಜೆ ಸಹಾಯಕರು, ಸಹಾಯಕ ನೋಂದಣಿ ಕಛೇರಿ, ಹಾವೇರಿ. ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 96 ಸೌಹಾರ್ದ ಸಹಕಾರಿಗಳಿಂದ 113 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ವಿಷಯದ ಕುರಿತು ಶ್ರೀ ರಾಚಯ್ಯ ಹಿರೇಮಠ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಎಸ್.ಜಿ.ಜೋಷಿ ಇವರು ಉಪನ್ಯಾಸ ನೀಡಿದರು.



**ಧಾರವಾಡ:** ದಿನಾಂಕ 25.05.2019 ರಂದು ಧಾರವಾಡ ಜಿಲ್ಲೆಗಳಲ್ಲಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಮಂತ್ರ ರೇಸಿಡೆನ್ಸಿ, ಹುಬ್ಬಳ್ಳಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಚಂದ್ರಕಾಂತ ಪಡಚಣ್ಣವರ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಮಾನ್ಯ ಅಧ್ಯಕ್ಷರು, ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ನವನಗರ, ಮಾನ್ಯ ನಿರ್ದೇಶಕರು, ಕೆ.ಸಿ.ಸಿ ಬ್ಯಾಂಕ್, ಧಾರವಾಡ. ಮತ್ತು ಮಾನ್ಯ ಸದಸ್ಯರು, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ., ಹುಬ್ಬಳ್ಳಿ. ಇವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ವಿ.ಜಿ. ಕುಲಕರ್ಣಿ, ಮಾನ್ಯ ನಿವೃತ್ತ ಸಹಕಾರ ಅಭಿವೃದ್ಧಿ ಅಧಿಕಾರಿ, ಧಾರವಾಡ ಇವರು ಭಾಗವಹಿಸಿದ್ದರು. ಈ ತರಬೇತಿಯಲ್ಲಿ 38 ಸೌಹಾರ್ದ ಸಹಕಾರಿಗಳಿಂದ 69 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ವಿಷಯದ ಕುರಿತು ಶ್ರೀ ರಾಚಯ್ಯ ಹಿರೇಮಠ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ವಿ.ಜಿ.ಕುಲಕರ್ಣಿ ಇವರು ಉಪನ್ಯಾಸ ನೀಡಿದರು.



**ವಿಜಯಪುರ:** ದಿನಾಂಕ 28.05.2019 ರಂದು ವಿಜಯಪುರ ಜಿಲ್ಲೆಯ ವಿಜಯಪುರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಹೋಟಲ್ ಶುಭಶ್ರೀಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಸಿದ್ರಾಮಪ್ಪ ಉಪ್ಪಿನ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಪಿ.ಬಿ.ಕಾಳಗಿ ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮುಖ್ಯ ಅತಿಥಿಗಳಾಗಿ ಶ್ರೀ ಅಮರನಾಥ ಬರಾದಾರ, ಮುಖ್ಯ ಕಾರ್ಯನಿರ್ವಾಹಕರು, ಸಿಂಡಿಕೇಟ್ ಸೌಹಾರ್ದ ಸಹಕಾರಿ ನಿ. ವಿಜಯಪುರ, ಇವರು ಭಾಗವಹಿಸಿದ್ದರು.

ಈ ತರಬೇತಿಯಲ್ಲಿ 110 ಸೌಹಾರ್ದ ಸಹಕಾರಿಗಳಿಂದ 129 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಎಸ್.ಜಿ. ಜೋಷಿ, ಮಾನ್ಯ ನಿವೃತ್ತ ಸಹಾಯಕ ನಿಬಂದಕರು, ಉಪನ್ಯಾಸ ನೀಡಿದರು.

ದಿನಾಂಕ 29.05.2019ರಂದು ವಿಜಯಪುರ ಜಿಲ್ಲೆಯ ಇಂಡಿ, ಬಸವನ ಬಾಗೇವಾಡಿ, ಸಿಂದಗಿ ಹಾಗೂ ಮುದ್ದೇಬಿಹಾಳ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಕುರಿತು ತರಬೇತಿಯನ್ನು ಹೋಟಲ್ ಶುಭಶ್ರೀಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಗಾರದ ಅಧ್ಯಕ್ಷತೆಯನ್ನು ಶ್ರೀ ಸಿದ್ರಾಮಪ್ಪ ಉಪ್ಪಿನ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು. ಉದ್ಘಾಟನೆಯನ್ನು ಶ್ರೀ ಸಂಗಮೇಶ ಬಬಲೇಶ್ವರ, ಮಾನ್ಯ ಅಧ್ಯಕ್ಷರು ಬಸವಶ್ರೀ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮುಖ್ಯ ಅತಿಥಿಗಳಾಗಿ ಶ್ರೀ ಫೈಯಾಜ್ ಅಹ್ಮದ್ ಕಲಾದಗಿ, ಮಾನ್ಯ ರಕ್ಷಣಾ ವೇದಿಕೆಯ ಅಧ್ಯಕ್ಷರು ಹಾಗೂ ಸಿದ್ಧವಾಣಿ ದಿನಪತ್ರಿಕೆಯ ಸಂಪಾದಕರು, ಇವರು ಭಾಗವಹಿಸಿದ್ದರು.

ಈ ತರಬೇತಿಯಲ್ಲಿ 68 ಸೌಹಾರ್ದ ಸಹಕಾರಿಗಳಿಂದ 89 ಪ್ರತಿನಿಧಿಗಳು ಭಾಗವಹಿಸಿದ್ದರು.

ದಾವಾ ದಾಖಲಾತಿ ಮತ್ತು ದಾಖಲಾತಿ ಪ್ರಕಿಯೆ ಹಾಗೂ ಸಾಲ ವಸೂಲಾತಿ ವಿಷಯದ ಕುರಿತು ಶ್ರೀ ಎಸ್.ಜಿ. ಜೋಷಿ, ಮಾನ್ಯ ನಿವೃತ್ತ ಸಹಾಯಕ ನಿಬಂದಕರು, ಉಪನ್ಯಾಸ ನೀಡಿದರು.

## ಪ್ರವೇಶ ತರಬೇತಿ ಕಾರ್ಯಕ್ರಮ



**ಉಡುಪಿ:** ಉಡುಪಿ ಜಿಲ್ಲೆಯಲ್ಲಿ 2017–18 ಹಾಗೂ 2018–19 ರಲ್ಲಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶ ತರಬೇತಿಯನ್ನು ದಿನಾಂಕ 25.05.2019 ಶನಿವಾರದಂದು ಉಡುಪಿ ಜಿಲ್ಲಾ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಧರ್ ಸೋಮಯಾಜಿ ಇವರು ಸೌಹಾರ್ದ ಸಹಕಾರಿಗಳ ದೈನಂದಿನ ವ್ಯವಹಾರದಲ್ಲಿ ಇರಬೇಕಾದ ದಾಖಲೆಗಳ ಕುರಿತು ಹಾಗೂ ಶ್ರೀ ಮಂಜುನಾಥ್ ಎಸ್.ಕೆ ನಿರ್ದೇಶಕರು ಕರಾಸೌಸಂಸನಿ., ಬೆಂಗಳೂರು ಇವರು ಸಹಕಾರಿಗಳಿಗೆ ಸಹಕಾರಿಗಳ ಸಾಮಾಜಿಕ ಜವದ್ದಾರಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕರ ಜವಬ್ದಾರಿಗಳ ಕುರಿತು ಸಹಕಾಗಳ ಪ್ರತಿನಿಧಿಗಳೂಂದಿಗೆ ಚರ್ಚಿಸಿದರು. ಶ್ರೀ ಗುರುಪ್ರಸಾದ್ ಬಂಗೇರವರು ಮುಖ್ಯಕಾರ್ಯನಿರ್ವಾಹಕರ ಕರ್ತವ್ಯಗಳು ಹಾಗೂ ಜವಬ್ದಾರಿಗಳ ಕುರಿತು ಮತ್ತು ಸದರಿ ತರಬೇತಿಗೆ 10 ಸೌಹಾರ್ದ ಸಹಕಾರಿಗಳಿಂದ 15 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.




**ದಕ್ಷಿಣ ಕನ್ನಡ:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2017–18 ಹಾಗೂ 2018–19 ರಲ್ಲಿ ನೋಂದಣಿಯಾದ ಸೌಹಾರ್ದ ಸಹಕಾರಿಗಳಿಗೆ ಪ್ರವೇಶ ತರಬೇತಿಯನ್ನು ದಿನಾಂಕ 30.05.2019 ಗುರುವಾರದಂದು ದಕ್ಷಿಣ ಕನ್ನಡ ಜಿಲ್ಲಾ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ರೀಧರ್ ಸೋಮಯಾಜಿ ಪ್ರಧಾನ ವ್ಯವಸ್ಥಾಪಕರು, ಶ್ರೀ ಗುರುನರಸಿಂಹ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಇವರು ಸೌಹಾರ್ದ ಸಹಕಾರಿಗಳ ದೈನಂದಿನ ವ್ಯವಹಾರದಲ್ಲಿ ಇರಬೇಕಾದ ದಾಖಲೆಗಳ ಕುರಿತು ಹಾಗೂ ಶ್ರೀ ಗುರುಪ್ರಸಾದ್ ಬಂಗೇರ, ಹಿರಿಯ ವ್ಯವಸ್ಥಾಪಕ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಯೋಜಕರು ಇವರು ಮುಖ್ಯಕಾರ್ಯನಿರ್ವಾಹಕರ ಕರ್ತವ್ಯಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸುರೇಶ್ ರೈ, ಅಧ್ಯಕ್ಷರು ಶ್ರೀ ಒಡಿಯೂರು ಸೌಹಾರ್ದ ಸಹಕಾರಿ ನಿ., ಇವರು ವಹಿಸಿದ್ದರು. ಸದರಿ ತರಬೇತಿಗೆ 14 ಸೌಹಾರ್ದ ಸಹಕಾರಿಗಳಿಂದ 22 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

## ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರಗಳು ಸೌಹಾರ್ದ ಸಹಕಾರಿಗಳ ಭೇಟಿ



ದೇವನಹಳ್ಳಿ: ಅರುಣೋದಯ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿದರು.



ಗಂಗಾವತಿ: ಜ್ಯೋತಿಶ್ರೀ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿದರು.



ಗಂಗಾವತಿ: ಸ್ಪಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿದ್ದರು.



ಗಂಗಾವತಿ: ಶ್ರೀ ಭುವನೇಶ್ವರಿ ವಿವಿದೋದ್ದೇಶ ಸೌಹಾರ್ದ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ಅಧ್ಯಕ್ಷರನ್ನು ಸನ್ಮಾನಿಸಿದ್ದರು.



ಹೊಸಪೇಟೆ: ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಎಲ್ ಎಸ್ ಆನಂದ ರವರು ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಅವರನ್ನು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶರಣಗೌಡ ಜಿ. ಪಾಟೀಲ ರವರು ಸನ್ಮಾನಿಸಿದರು.



ಬೆಂಗಳೂರು: ದಿನಾಂಕ: 08.05.2019 ರಂದು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಮಾನ್ಯ ಶ್ರೀ ಜಿ.ಎಸ್ ಗುಂಡೂರಾವ್ ರವರು ಬೆಂಗಳೂರು ಪ್ರಾಂತೀಯ ಕಛೇರಿಗೆ ಭೇಟಿ ನೀಡಿ ಪ್ರಾಂತದ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಿದರು. ಇದೇ ಸಂದರ್ಭದಲ್ಲಿ ಪ್ರಾಂತದ ವತಿಯಿಂದ ಸನ್ಮಾನಿಸಲಾಯಿತು.



ಕಲಬುರಗಿ: ಓಂ ಶ್ರೀ ವೀರಬದ್ರೇಶ್ವರ ಸೌಹಾರ್ದ ಸಹಕಾರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಭೇಟಿ ನೀಡಿದರು.

ಹರಪನಹಳ್ಳಿ: ದಿನಾಂಕ 13.05.2019ರಂದು ಅಟಲ್ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಆದರ್ಶ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ, ಶ. ಬ್ರ. ಶ್ರೀ ಚಂದ್ರಮೌಳೇಶ್ವರ ಶಿವಾಚಾರ್ಯ ಮಹಾ ಸ್ವಾಮೀಜಿ ಪ್ರತಿಷ್ಠಾನ ಅಭಿವೃದ್ಧಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಗೂ ಹರಪನಹಳ್ಳಿ ತಾಲ್ಲೂಕು ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಸಹಕಾರಿಗೆ ಭೇಟಿ ನೀಡಿದಾಗ ಮಾನ್ಯ ವ್ಯವಸ್ಥಾಪಕ ನಿರ್ದೇಶಕರನ್ನು ಸನ್ಮಾನಿಸಿದ್ದರು.

## ಅನಿಯಂತ್ರಿತ ಠೇವಣಿ ಸಂಗ್ರಹಣೆಗಾಗಿ ಪತ್ರಿಕೆಗಳಲ್ಲಿ ಟಿ.ವಿ. ಮಾಧ್ಯಮಗಳಲ್ಲಿ ಜಾಹೀರಾತು ಪ್ರಕಟಿಸುವುದು ಅಪರಾಧ

ಸೌಹಾರ್ದ ಸಹಕಾರಿಗಳಿಗಾಗಿ ಅಥವಾ ಸಹಕಾರ ಸಂಸ್ಥೆಗಳಾಗಲಿ ಠೇವಣಿದಾರರಿಗೆ ಹೆಚ್ಚಿನ ಬಡ್ಡಿ ನೀಡುವ ಆಮಿಷವೊಡ್ಡಿ ಅನಿಯಂತ್ರಿತ ಠೇವಣಿಗಳನ್ನು ಶೇಖರಿಸುವುದು ಅಪರಾಧವಾಗುತ್ತದೆ. ಈ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸುವುದು ಏಜೆಂಟರುಗಳ ಮೂಲಕ ಠೇವಣಿ ಸಂಗ್ರಹಿಸುವುದು. (ಏಜಂಟರುಗಳೇ ಅಪರಾಧಿಗಳಾಗುತ್ತಾರೆ.)ಸಹ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಸುಗ್ರೀವಾಜ್ಞೆ 2019 ರನ್ವಯ ಅಪರಾಧವಾಗುತ್ತದೆ. ಇವರಿಗೆ 1 ರಿಂದ 5 ವರ್ಷಗಳ ವರೆಗೆ ಶಿಕ್ಷೆ ಹಾಗೂ 10 ಲಕ್ಷರೂಗಳ ವರೆಗೆ ದಂಡವಿಧಿಸಲು ಅವಕಾಶವಿದೆ. ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದಾಗಿದೆ.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ

### Appeal for Research Proposal

Indian Society for Studies in Cooperation was registered in the year 1979 primarily to promote Research and Studies in Cooperation. Kindly submit your Research Proposals in the areas of your interest like Dairy Cooperatives, Housing Cooperatives, Sugar Cooperatives, Urban Cooperative Banks, Rural Development and Fishers etc. ISSC is happy to support to the Research Proposal financially.

ಸಂಯುಕ್ತ ಸಹಕಾರಿಯ ವತಿಯಿಂದ ಅನುಮತಿ ಪಡೆದು ಇ–ಸ್ಟಾಂಪ್ ವ್ಯವಹಾರ ನಡೆಸುತ್ತಿರುವ ಸಹಕಾರಿಗಳಿಗೆ, ಸಂಯುಕ್ತ ಸಹಕಾರಿಯು ಹೆಚ್.ಪಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಮಾರುಕಟ್ಟೆ ದರಕ್ಕಿಂತ ಕಡಿಮೆ ದರದಲ್ಲಿ ಕಾಟ್ರಿಡ್ಜ್‌ಗಳನ್ನು ಸದಸ್ಯ ಸಹಕಾರಿಗಳಿಗೆ ಪೂರೈಸುತ್ತಿದೆ. ಸದಸ್ಯ ಸಹಕಾರಿಗಳು ಇದರ ಪೂರ್ಣ ಲಾಭ ಪಡೆಯಲು ಕೋರಿದೆ. ಕಾಟ್ರಿಡ್ಜ್ ದರಗಳು ಈ ಕೆಳಗಿನಂತಿವೆ.

| ಕಾಟ್ರಿಡ್ಜ್ ಹೆಸರು | ಬೆಲೆ |
|---|---|
| HP 280A | 3925/- |
| Hp 505AC | 4600/- |
| Samsung 3320ND | 5100/- |

## ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ತರಬೇತಿ – ಜುಲೈ 01 ರಿಂದ 07ರವರೆಗೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಬ್ಯಾಂಕುಗಳ ನೂತನ ಸಿಬ್ಬಂದಿಯವರಿಗಾಗಿ 7 ದಿನಗಳ "ಬೇಸಿಕ್ ಬ್ಯಾಂಕಿಂಗ್ ಕೋರ್ಸ್" ಅನ್ನು ಬೆಂಗಳೂರಿನ ಪದ್ಮನಾಭನಗರದಲ್ಲಿರುವ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ದಿನಾಂಕ 01 ರಿಂದ 07 ಜುಲೈ 2019ರವರೆಗೆ ಆಯೋಜಿಸಲಾಗಿದೆ. ನೂತನವಾಗಿ ನೇಮಕವಾಗಿರುವ ಸಿಬ್ಬಂದಿಯವರು ಅಥವಾ ಈಗಾಗಲೇ ನೇಮಕವಾಗಿ ತರಬೇತಿ ಹೊಂದಿರದ ಸಿಬ್ಬಂದಿಯವರು ಈ ತರಬೇತಿಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ಒಂದು ಸೌಹಾರ್ದ ಸಹಕಾರಿ ಬ್ಯಾಂಕಿನಿಂದ ಕನಿಷ್ಠ 2, ಗರಿಷ್ಠ 5 ಸಿಬ್ಬಂದಿಯವರು ಭಾಗವಹಿಸಬಹುದು. ತರಬೇತಿ ಶುಲ್ಕ ಪ್ರತಿ ಶಿಬಿರಾರ್ಥಿಗೆ ರೂ.3500/–ಗಳನ್ನು (ವಸತಿ, ಊಟ–ಉಪಹಾರಗಳ ವೆಚ್ಚಕ್ಕಾಗಿ) ಹಾಗೂ ತರಬೇತಿ ಸ್ಥಳಕ್ಕೆ ಬಂದು ಹೋಗುವ ವೆಚ್ಚಗಳನ್ನು ಸೌಹಾರ್ದ ಸಹಕಾರಿ ಬ್ಯಾಂಕಿನವರು ಭರಿಸಬೇಕಾಗುತ್ತದೆ. ಅಧ್ಯಯನ ಸಾಹಿತ್ಯ, ತಜ್ಞರಿಂದ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ ವ್ಯವಸ್ಥೆಗಳನ್ನು, ವಿವಿಧ ಸಹಕಾರಿಗಳ ಅಧ್ಯಯನ ವ್ಯವಸ್ಥೆಯನ್ನು ಸಂಯುಕ್ತ ಸಹಕಾರಿಯಿಂದ ಮಾಡುತ್ತದೆ. ಶಿಬಿರಾರ್ಥಿಗಳು ವಿವರಗಳೊಂದಿಗೆ ಅರ್ಜಿ ಭರ್ತಿ ಮಾಡಿ ಸಂಯುಕ್ತ ಸಹಕಾರಿಗೆ ದಿನಾಂಕ 22.06.2019ರ ಒಳಗಾಗಿ ಕಳುಹಿಸಲು ಕೋರಿದೆ. ಶಿಬಿರಾರ್ಥಿಗಳು ಭರ್ತಿ ಮಾಡಿ ಕಳುಹಿಸಬೇಕಿರುವ ಅರ್ಜಿ ನಮೂನೆಯು ಸಂಯುಕ್ತ ಸಹಕಾರಿಯ ವೆಬ್‌ಸೈಟ್ **www.souharda.coop** ನಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಶಿಕ್ಷಣ ವಿಭಾಗದ ತರಬೇತಿ ಅಧಿಕಾರಿಯಾದ ಶ್ರೀ ಕಾರಕೂನ್ ಮೊ: 8884466710 ಇವರನ್ನು ಸಂಪರ್ಕಿಸಬಹುದು.



ಮಸ್ಕಿ: ಶ್ರೀ ಗುರು ಗವಿಸಿದ್ದೇಶ್ವರ ಸೌಹಾರ್ದ ಸಹಕಾರಿಯ ಇ-ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬಿ ರಾಜಶೇಖರ ರವರು ಭಾಗವಹಿಸಿದರು.



ರಾಯಚೂರು ಜಿಲ್ಲೆಯ ಮಸ್ಕಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿನಾಂಕ 30.05.2019ರಂದು ಮಸ್ಕಿಯ ಶ್ರೀ ಗುರು ಗವಿಸಿದ್ದೇಶ್ವರ ಸೌಹಾರ್ದ ಸಹಕಾರಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ತರಬೇತಿಯಲ್ಲಿ 16 ಸೌಹಾರ್ದ ಸಹಕಾರಿಗಳಿಂದ 19 ಜನ ಪ್ರತಿನಿಧಿಗಳು ಭಾಗವಹಿಸಿದರು.

# ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ ಇದರ ಉದ್ಘಾಟನಾ ಕಾರ್ಯಕ್ರಮ



**ಗಂಗಾವತಿ:** ದಿನಾಂಕ 10.05.2019 ಬೆಳಗ್ಗೆ 11:00 ಗಂಟೆಗೆ ಗಂಗಾವತಿ ನಗರದ ಸಿಂಗನಾಳ ಮಲ್ಲಪ್ಪ ಸಾಹುಕಾರ ಆವರಣ, ಬನ್ನಿಗಿಡ ಕ್ಯಾಂಪ್ ಹತ್ತಿರ "ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿ, ಕೊಪ್ಪಳ ಇದರ ನೂತನ ಕಛೇರಿಯ ಉದ್ಘಾಟನಾ ಸಮಾರಂಭವನ್ನು" ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಗಂಗಾವತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಪ್ರಾರಂಭವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಕಛೇರಿಯ ಉದ್ಘಾಟನೆಯನ್ನು ರಿಬ್ಬನ್ ಕತ್ತರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವೇದಿಕೆಯ ಕಾರ್ಯಕ್ರಮವನ್ನು ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು, ಗಂಗಾವತಿಯ ಶಾಸಕರಾದ ಮಾನ್ಯ ಶ್ರೀ ಪರಣ್ಣ ಮುನವಳ್ಳಿ ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ. ಶ್ರೀಧರ್‌ವರು, ಶ್ರೀ ತಿಮ್ಮಯ್ಯ ಶೆಟ್ಟಿ ರವರು, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪಾ. ಬಿ. ಪತ್ತಾರ ರವರು ಹಾಗೂ ಉಪಾಧ್ಯಾಕ್ಷರಾದ ಶ್ರೀ ಶಂಕರಗೌಡ.ಎಲ್.ಎಚ್ ರವರು ಮತ್ತು ಸಹಕಾರಿ ಕ್ಷೇತ್ರದ ಅನೇಕ ಗಣ್ಯ ವ್ಯಕ್ತಿಗಳು ದೀಪವನ್ನು ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಲಾಯಿತು.

ಕೊಪ್ಪಳದ ಪರಮಾ ಪೂಜ್ಯ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟದ ನಿರ್ದೇಶಕರಾದ ಶ್ರೀ ಮಹಾಲಿಂಗಪ್ಪ. ಎಮ್. ದೋಟಿಹಾಳರವರು ವೇದಿಕೆ ಮೇಲೆ ಆಸೀನರಾಗಿರುವಂತಹ ಎಲ್ಲಾ ಅತಿಥಿಗಳನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ರಚನೆಯಲ್ಲಿ ತಮ್ಮಗೆ ಆದಂತಹ ಅನುಭವಗಳನ್ನು ತಿಳಿಸಿದರು. ಒಕ್ಕೂಟ ಸಹಕಾರಿಯ ರಚನೆಯಲ್ಲಿ ಅನೇಕ ಹಿರಿಯರ ಮಾರ್ಗದರ್ಶನವಿದೆ ಎಂದು ಉಲ್ಲೇಖಿಸಿದರು. ಅಲ್ಲದೆ ಕಲಬುರಗಿ ಪ್ರಾಂತದ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಐ.ಎಸ್.ಗಿರಡ್ಡಿ ರವರು ಒಕ್ಕೂಟದ ಉಪವಿಧಿಯು ಒಂದು ಮಾದರಿ ಉಪವಿಧಿ ಎಂದು ಬಣ್ಣಿಸಿರುವ ಬಗ್ಗೆ ಕಾರ್ಯಕ್ರಮದಲ್ಲಿ ನೆನೆದರು. ಒಕ್ಕೂಟದ ನೋಂದಣಿಗೆ ಕೈಗೊಂಡ ಕಾರ್ಯಚಟುವಟಿಕೆಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದರು ಮತ್ತು ಒಕ್ಕೂಟದಿಂದ ಆಗುವ ಉಪಯೋಗ, ಸೌಹಾರ್ದ ಸಹಕಾರಿಗಳಿಗೆ ಒಕ್ಕೂಟದಿಂದ ಸಿಗುವ ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ಬಳಿಕ ಗಂಗಾವತಿಯ ಶಾಸಕರಾದ ಮಾನ್ಯ ಶ್ರೀ ಪರಣ್ಣ ಮುನವಳ್ಳಿರವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಚನೆಗೊಳ್ಳತ್ತಿರುವ ಜಿಲ್ಲಾ ಸೌಹಾರ್ದ ಸಹಕಾರಿ ಒಕ್ಕೂಟಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ ಎಂದರು. ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ರಚನೆಯ ಬಗ್ಗೆ ಶ್ಲಾಘೀಸಿ, ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟವು ರಾಜ್ಯದ ಇತರೆ ಒಕ್ಕೂಟ ಸೌಹಾರ್ದ ಸಹಕಾರಿಗಳಿಗೆ ಮಾದರಿಯಾಗಬೇಕು ಆಶಿಸಿದರು.

ನಂತರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟಗಳು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಬೆನ್ನಲುಬಾಗಿ ಕಾರ್ಯನಿರ್ವಹಿಸಬೇಕು ಎಂದರು ಮತ್ತು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಸದಸ್ಯರ ಸಹಕಾರಿಗಳ ಅನುಕೂಲಕ್ಕಾಗಿ ಶ್ರಮಿಸುತ್ತಿದೆ ಎಂದರು. ಪ್ರಸ್ತುತ ಸಹಕಾರಿಗಳು ಎದುರುಸುತ್ತಿರುವ ಆದಾಯ ತೆರಿಗೆ ಸಮಸ್ಯೆಯ ಪರಿಹಾರ ಸಂಯುಕ್ತ ಸಹಕಾರಿಯ ನಿಯೋಗವು ಕೇಂದ್ರ ವಿತ್ತ ಸಚಿವರನ್ನು, ಸಿಬಿಡಿಟಿ ಅಧ್ಯಕ್ಷರನ್ನು ಭೇಟಿ ಮಾಡಿ ಸಮಸ್ಯೆಯ ಕುರಿತು ಮನವರಿಕೆ ಮಾಡಿಕೊಟ್ಟಿದೆ ಎಂದು ಉಲ್ಲೇಖಿಸಿದರು. ಮುಂದುವರೆದು ಮಾನ್ಯ ಅಧ್ಯಕ್ಷರು ಸದಸ್ಯ ಸಹಕಾರಿಗಳ ಹಿತಕ್ಕಾಗಿ ಸಂಯುಕ್ತ ಸಹಕಾರಿಯು ಕಾರ್ಯನಿರ್ವಹಿಸುತ್ತಿದೆ. ಇದಕ್ಕೆ ಒಕ್ಕೂಟ ಸಹಕಾರಿಗಳು ಕೈಜೋಡಿಸಬೇಕೆಂದು ಕೋರಿದರು. ಒಕ್ಕೂಟ ಸಹಕಾರಿಗಳು ಸಂಯುಕ್ತ ಸಹಕಾರಿಯೊಂದಿಗೆ ಒಂದೇ ಕುಟುಂಬದ ಸದಸ್ಯರಂತೆ ಕಾರ್ಯನಿರ್ವಹಿಸಿ ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಿ, ಅವರ ಕುಂದು–ಕೊರತೆಗಳನ್ನು ನಿವಾರಿಸಬೇಕು ಎಂದರು ಹಾಗೂ ಅದೇ ರೀತಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ನಡೆಸುವ ತರಬೇತಿ ಕಾರ್ಯಕ್ರಮದಲ್ಲಿ ಒಕ್ಕೂಟವು ಸಕ್ರಿಯವಾಗಿ ಭಾಗಿಯಾಗಿ ಅಗತ್ಯವಾದ ಸಲಹೆ–ಸೂಚನೆಗಳನ್ನು ನೀಡುತ್ತಾ ತರಬೇತಿ ಕಾರ್ಯಕ್ರಮಗಳನ್ನು ಯಶ್ವಸಿಗೊಳಿಸಬೇಕು ಎಂದರು ಮತ್ತು ಒಕ್ಕೂಟವು ತಮ್ಮ ಸದಸ್ಯ ಸಹಕಾರಿಗಳಿಗೆ ವಿವಿಧ ರೀತಿಯ ಚಟುವಟಿಕೆಗಳನ್ನು, ಸೇವಾ–ಸೌಕರ್ಯಗಳನ್ನು ನೀಡಿ ಬರುವ ಆದಾಯದಿಂದ ಒಕ್ಕೂಟದ ನಿರ್ವಹಣೆ ಸಹಾಯಕವಾಗುವುದು ಎಂದರು. ಇಂದು ಸಹಕಾರಿಯು ಎಲ್ಲ ಕ್ಷೇತ್ರದಲ್ಲಿ ತಲುಪಿರುವುದು ಪ್ರಶಂಸನೀಯ ಎಂದು ತಿಳಿಸಿ, ರಾಜ್ಯದಲ್ಲಿ ಎಲ್ಲ ಸಹಕಾರಿಗಳಿಂದ ಒಂದು

ಆಸ್ಪತ್ರೆಯನ್ನು ಪ್ರಾರಂಭಿಸುವ ಬಗ್ಗೆ ಇಂಗಿತ ವ್ಯಕ್ತಪಡಿಸಿದರು.

ನಂತರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ.ಬಿ.ಪತ್ತಾರ್‌ರವರು ಒಕ್ಕೂಟದ ರಚನೆಯ ಅವಶ್ಯಕತೆ, ಇದರಿಂದ ಆಗುವ ಅನುಕೂಲತೆ ಹಾಗು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಗದರ್ಶನದಲ್ಲಿ ಒಕ್ಕೂಟದ ಮುಂದಿನ ಕಾರ್ಯಯೋಜನೆಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು.

ನಂತರ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿಯು ಆಯ್ಕೆ ಮಾಡಿದ ಈ ಕೆಳಗಿನ 7 ಸೌಹಾರ್ದ ಸಹಕಾರಿಗಳಿಗೆ "ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿಯನ್ನು" ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು ಪ್ರಧಾನ ಮಾಡಿದರು. ಈ ಪ್ರಶಸ್ತಿಯನ್ನು ಆಡಳಿತ ಮಂಡಳಿಯು ಆಯಾ ಸಹಕಾರಿಯ ಕಾರ್ಯವೈಖರಿ, ಸಹಕಾರಿಯ ಪ್ರಗತಿ, ಸಾಮಾಜಿಕ ಕಾರ್ಯಚಟುವಟಿಕೆಗಳು ಇತ್ಯಾದಿ ಮಾನದಂಡಗಳ ಮೂಲಕ ಆಯ್ಕೆ ಮಾಡಲಾಗಿರುತ್ತದೆ ಎಂದು ಒಕ್ಕೂಟವು ತಿಳಿಸಿದೆ.

1. **ಶ್ರೀ ನೀಲಕಂಠೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಗಂಗಾವತಿ.**
2. **ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ.**
3. **ಅಭಿನವಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕನಕಗಿರಿ.**
4. **ಶ್ರೀ ಕನಕದಾಸ ಪತ್ತಿನ ಸೌಹಾರ್ದ ಪತ್ತಿನ ಸೌಹಾರ್ದ ಸಹಕಾರಿ ನಿ.,ಕುಷ್ಟಗಿ.**
5. **ಶ್ರೀ ವಿಜಯ ಮಹಾಂತೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಯಲಬುರ್ಗಾ.**
6. **ಮಾರ್ಗಸೂಚಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,ಕುಕನೂರು.**
7. **ವಿ.ಆರ್.ಸಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾರಟಗಿ,**

ಕಾರ್ಯಕ್ರಮದ ಮಧ್ಯಾಹ್ನದ ಅವಧಿಯಲ್ಲಿ ಸಮಾಲೋಚನಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ವಹಿಸಿದ್ದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ.ಶ್ರೀಧರ ರವರು, ಶ್ರೀ ತಿಮ್ಮಯ್ಯಶೆಟ್ಟಿ ಇವರು ಉಪಸ್ಥಿತರಿದ್ದರು. ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ತಮಗೆ ಆಗುತ್ತಿರುವ ತೊಂದರೆಗಳ ಬಗ್ಗೆ ವಿವರಿಸಿದರು. ಕಲಬುರ್ಗಿ ಪ್ರಾಂತ್ಯಕ್ಕೆ ಸೌಹಾರ್ದ ಸಹಕಾರಿಗಳ ಸಂಚಾರಿ ನ್ಯಾಯಾಲಯದ ಅವಶ್ಯಕತೆ, ಇ-ಸ್ಟಾಂಪಿಂಗ್‌ನಲ್ಲಿ ಆಗುತ್ತಿರುವ ಸಮಸ್ಯೆಗಳು ಮತ್ತು ಇತ್ಯಾದಿ ವಿಷಯಗಳ ಮೇಲೆ ಹಾಜರಿದ್ದ ಪ್ರತಿನಿಧಿಗಳು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ಅಧ್ಯಕ್ಷರು ವಿಸ್ತೃತವಾಗಿ ಉತ್ತರಿಸಿ, ಸೌಹಾರ್ದ ಸಹಕಾರಿಗಳಿಗೆ ಆಗುತ್ತಿರುವ ತೊಂದರೆ ಅಗತ್ಯವಾದ ಸಲಹೆ ಮತ್ತು ಸೂಚನೆಗಳನ್ನು ನೀಡಿದರು. ಬಳಿಕ ಮಾನ್ಯ ಅಧ್ಯಕ್ಷರು ಸೌಹಾರ್ದ ಸಹಕಾರಿಗಳಿಗೆ ಅಗತ್ಯವಾದ ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿ ವತಿಯಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 140 ಸೌಹಾರ್ದ ಸಹಕಾರಿಗಳಿಂದ 425 ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.



**ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಆಡಳಿತ ಮಂಡಳಿ ವತಿಯಿಂದ ಮಾನ್ಯ ಅಧ್ಯಕ್ಷರಿಗೆ ಸನ್ಮಾನ**

## 9ನೇ ವಾರ್ಷಿಕೋತ್ಸವ



**ಬೆಂಗಳೂರು:** ಸ್ಪಂದನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ 9ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ, ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಉಪಸ್ಥಿತರಿದ್ದರು.

## ಇ-ಸ್ಟಾಂಪಿಂಗ್ ಉದ್ಘಾಟನಾ ಕಾರ್ಯಕ್ರಮ



**ಧಾರವಾಡ:** ದಿನಾಂಕ 23.04.2019 ಶನಿವಾರ ಬೆಳಿಗ್ಗೆ 10.00 ಗಂಟೆಗೆ ಸಿದ್ಧಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಕಛೇರಿಯಲ್ಲಿ ಇ-ಸ್ಟಾಂಪಿಂಗ್ ಉದ್ಘಾಟನೆಯನ್ನು ಶ್ರೀ ಲಕ್ಷ್ಮೀ ಪೂಜಾ ಕಾರ್ಯಕ್ರಮದೊಂದಿಗೆ ಪ್ರಾರಂಭಿಸಲಾಯಿತು. ಇ-ಸ್ಟಾಂಪಿಂಗ್ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ವಿ. ರೇವಣಕರ ರವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಉದ್ಘಾಟನಾ ಕಾರ್ಯಕ್ರಮ



**ಬೆಂಗಳೂರು:** ದಿನಾಂಕ; 07.05.2019 ರಂದು ಜ್ಞಾನಶಾಲೆ ಸೌಹಾರ್ದ ಸಹಕಾರಿ ದೇವನಹಳ್ಳಿ ಶಾಖೆಯ ಉದ್ಘಾಟನೆಯನ್ನು ದೇವನಹಳ್ಳಿಯ ಮಾನ್ಯ ಶಾಸಕರಾದ ಶ್ರೀ ನಿಸರ್ಗ ನಾರಾಯಣ ಸ್ವಾಮಿರವರವರು ನೆರವೇರಿಸಿದರು. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್ ಕೃಷ್ಣಾರೆಡ್ಡಿ, ಚಿ. ನಾ ರಾಮು, ಜ್ಞಾನಶಾಲೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ್ ಕೆ ಮಹಾಜನ ಹಾಗೂ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು,



**ಮಂಗಳೂರು:** ದಿನಾಂಕ 11.05.2019ರಂದು ಪ್ರಣವ ಸೌಹಾರ್ದ ಸಹಕಾರಿ ನಿ., ಮಂಗಳೂರು ಇದರ ನೂತನ 4ನೇ ಶಾಖೆ ಉದ್ಘಾಟನೆಯನ್ನು ಒಡಿಯೂರು ಶ್ರೀ ಗುರುದೇವಾನಂದ ಸಂಸ್ಥಾನದ ಸ್ವಾಧ್ವಿ ಶ್ರೀ ಮತಾನಂದಮಯಿಯವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಹಾಗೂ ಕ್ಯಾಂಪ್ಕೋ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಆರ್ ಸತೀಶ್ಚಂದ್ರ ರವರು ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಮಾಲತಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಜಿ. ಆರ್. ಪ್ರಸಾದ್ ರವರು ವಹಿಸಿದರು.




**ಮಂಗಳೂರು:** ಗ್ರಾಮ ಸಮೃದ್ಧಿ ಸೌಹಾರ್ದ ಸಹಕಾರಿ ನಿ., ಕರಿಂಜೆ ಇದರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ ರವರು ಉಪಸ್ಥಿತರಿದ್ದರು.



**ಗದಗ:** ಸೌಭಾಗ್ಯಲಕ್ಷ್ಮಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಮುಂಡರಗಿ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎಸ್.ದೇಶಪಾಂಡೆ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಭಾಗವಹಿಸಿದರು.

## ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಎಸ್. ಆರ್ ರವಿಕುಮಾರ್
ಮುಖ್ಯಕಾರ್ಯನಿರ್ವಹಕರು
ಜನನ : 18–05–1974
ಮರಣ : 02–06–2019

ಸೀತೂರು ವಾಸಿ, ಸಹೃದಯಿ, ಸರಳ ಸಜ್ಜನ ಶ್ರೀಯುತರಾದ ಎಸ್.ಆರ್.ರವಿಕುಮಾರ್ ರವರು ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್ ನಿಯಮಿತ, ವಿನೋಬಾ ರಸ್ತೆ, ಕೊಪ್ಪ. ಇದರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯಾಗಿದ್ದು ದಿನಾಂಕ 02–6–2019 ಭಾನುವಾರದಂದು ಸ್ವರ್ಗಸ್ಥರಾಗಿರುತ್ತಾರೆ. ಅವರು ಸಂಸ್ಥೆ ಪ್ರಾರಂಭಗೊಂಡ ದಿನದಿಂದ ಸುಮಾರು ಹದಿನೈದು ವರ್ಷದಿಂದ ನಮ್ಮ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಅವರ ಅಕಾಲಿಕ ಮೃತ್ಯುವು ನಮ್ಮ ಸಂಸ್ಥೆಗೆ ಒಂದು ಭರಿಸಲಾಗದ ನಷ್ಟವಾಗಿದೆ. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ ಹಾಗೂ ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುವ,

**ಸದಸ್ಯರು, ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ.**
**ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ–ಆಪರೇಟೀವ್, ನಿಯಮಿತ,**

# ಸುಕೋ ಬ್ಯಾಂಕ್ – ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮ



**ರಾಯಚೂರು:** ಸುಕೋ ಬ್ಯಾಂಕ್‌ನ ಪ್ರಾರಂಭದಿಂದಾಗಿ ಸಂಕಷ್ಟದಲ್ಲಿದ್ದ ಕರ್ನಾಟಕದ ಸಹಕಾರಿ ಕ್ಷೇತ್ರಕ್ಕೆ ಹೊಸದಿಕ್ಕೇ ಸಿಕ್ಕಂತಾಯಿತು ಎಂದು ಶಾಸಕ ಟಿ. ರಘುಮೂರ್ತಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸುಕೋ ಬ್ಯಾಂಕ್‌ನ ಚಳ್ಳಕೆರೆ ಶಾಖೆಯ ಸ್ಥಳಾಂತರಗೊಂಡ ನೂತನ ಕಟ್ಟಡದ ಉದ್ಘಾಟನೆಯನ್ನು ಸೋಮವಾರ ನೆರವೇರಿಸಿ ಮಾತನಾಡಿದ ಅವರು, ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆ ಸಹಕಾರಿ ಕ್ಷೇತ್ರವು ಸಂಕಷ್ಟದಲ್ಲಿತ್ತು. ಸಹಕಾರಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯೇ ಮೂರ್ಖತನದ ಪರಮಾವಧಿ ಎಂದೇ ಪರಿಗಣಿಸಲ್ಪಟ್ಟಿತ್ತು. ಸಹಕಾರಿ ಕ್ಷೇತ್ರದ ಸವಾಲುಗಳನ್ನು ಹಿಮ್ಮೆಟ್ಟಿಸುವ ದಿವ್ಯ ಸಂಕಲ್ಪವನ್ನು ಹೊಂದುವ ಮೂಲಕ ಹುಟ್ಟಿದ ಸುಕೋ ಬ್ಯಾಂಕ್, ಆರ್ಥಿಕವಾಗಿ ಸದೃಢವಾಗಿ ಬೆಳೆದು, ಹೆಮ್ಮರವಾಗಿ ಬೆಳೆದಿದೆ. ಬ್ಯಾಂಕ್‌ನ ಶಾಖೆಗಳು ಮತ್ತಷ್ಟು ಹೆಚ್ಚಾಗಿ, ವ್ಯವಹಾರ ವೃದ್ಧಿಯಾಗಲಿ ಎಂದು ಶುಭ ಹಾರೈಸಿದರು.

ಚಿತ್ರದುರ್ಗ ಜಿಲ್ಲಾ ಛೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಎನ್. ಸತೀಶ್ ಅವರು ಮುಖ್ಯ ಅತಿಥಿಗಳಾಗಿ ಮಾತನಾಡಿ, ಗ್ರಾಹಕರ – ಷೇರುದಾರರ ವಿಶ್ವಾಸ, ನಂಬಿಕೆ ಮತ್ತು ಪ್ರೀತಿಯ ಮೂಲಕ ಸುಕೋ ಬ್ಯಾಂಕ್ ಬಲವಾಗಿ – ಭದ್ರವಾಗಿ ಆರ್ಥಿಕವಾಗಿ ಬೇರೂರಿದ ಬ್ಯಾಂಕ್ ಆಗಿ ಸಹಕಾರಿ ಕ್ಷೇತ್ರದಲ್ಲಿ ಗುರುತಿಸಿಕೊಂಡಿದೆ ಎಂದರು.

ಸಹಕಾರಿ ಕ್ಷೇತ್ರದ ಬ್ಯಾಂಕ್ ಆಗಿದ್ದರೂ, ರಾಷ್ಟ್ರೀಕೃತ ಬ್ಯಾಂಕ್‌ಗಳ ಜೊತೆ ಸ್ಪರ್ಧಿಸುತ್ತ ಜೀವ ವಿಮೆ, ಆರೋಗ್ಯ ವಿಮೆ, ಜನರಲ್ ಇನ್ಶೂರೆನ್ಸ್ ಕ್ಷೇತ್ರದಲ್ಲೂ ಬ್ಯಾಂಕ್ ತನ್ನ ವ್ಯವಹಾರವನ್ನು ವಿಸ್ತರಿಸಿಕೊಳ್ಳುತ್ತಿರುವುದು ಅಭಿನಂದನೀಯ ಎಂದರು.

ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಸಹಕಾರಿ ಕ್ಷೇತ್ರದಲ್ಲಿ 25 ವರ್ಷಗಳ ಯಶಸ್ವಿ ಸೇವೆಯನ್ನು ಸಲ್ಲಿಸಿರುವ ಸುಕೋ ಬ್ಯಾಂಕ್ 16 ಜಿಲ್ಲೆಗಳಲ್ಲಿ ಕಾರ್ಯಕ್ಷೇತ್ರದ ಪರವಾನಿಗೆ ಪಡೆದು 11 ಜಿಲ್ಲೆಗಳಲ್ಲಿ 28 ಶಾಖೆಗಳನ್ನು ಹೊಂದಿದೆ. ಮಾರ್ಚ್ ಅಂತ್ಯಕ್ಕೆ 1122 ಕೋಟಿ ರೂಪಾಯಿಗಳ ಒಟ್ಟು ವಹಿವಾಟು ನಡೆಸಿ, ಕರ್ನಾಟಕದ ಸಹಕಾರಿ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದೆ. ಹಣ ವರ್ಗಾವಣೆ ಮತ್ತು ಇನ್ನಿತರೆ ವ್ಯವಹಾರಗಳಿಗಾಗಿ ಬ್ಯಾಂಕ್ ಆಧುನಿಕ ತಂತ್ರಜ್ಞಾನವನ್ನು ಬಳಕೆ ಮಾಡುತ್ತ, ಗ್ರಾಹಕಸ್ನೇಹಿ ಆಗಿ ಗುರುತಿಸಿಕೊಂಡಿದೆ ಎಂದರು.

ಸುಕೋ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಪರಿಮಳಾಚಾರ್ ಸ್ವಾಗತಿಸಿದರು. ಚಳ್ಳಕೆರೆ ಶಾಖೆಯ ವ್ಯವಸ್ಥಾಪಕರಾದ ಜ್ಯೋತಿ ಕಂಪ್ಲಿ ಅವರು ವಂದನಾರ್ಪಣೆ ಸಲ್ಲಿಸಿದರು.

ಸುಕೋ ಬ್ಯಾಂಕ್‌ನ ಸ್ಥಳಾಂತರದ ಹಿನ್ನಲೆಯಲ್ಲಿ ಏರ್ಪಡಿಸಿದ್ದ ಸುಕೋ ಸಂಗೀತ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜೀ ಕನ್ನಡ ಸರಿಗಮಪ ಖ್ಯಾತಿಯ ಪ್ರತಿಭೆಗಳಾದ ಬಳ್ಳಾರಿಯ ಜ್ಞಾನೇಶ್, ಹೊಸಪೇಟೆಯ ಭೂಮಿಕ ಮತ್ತು ಬೆಂಗಳೂರಿನ ಕೀರ್ತನ ಅವರ ಸುಮಧುರ ಗಾಯನ ರಸಮಂಜರಿ ಕಾರ್ಯಕ್ರಮ ನೆರೆದ ಸಾವಿರಾರು ಪ್ರೇಕ್ಷಕರ ಮನಸೂರೆಗೊಂಡಿತು.

## ಭಾರತೀಯ ಜೀವ ವಿಮಾ ನಿಗಮದ ಜೊತೆ ಒಪ್ಪಂದ

ಸಹಕಾರಿ ಕ್ಷೇತ್ರದಲ್ಲಿ ಇಪ್ಪತ್ತೈದು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಸುಕೋ ಬ್ಯಾಂಕ್ ಗ್ರಾಹಕರಿಗೆ ವಿಮಾ ಸೌಲಭ್ಯದ ಸೇವೆಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಭಾರತೀಯ ಜೀವ ವಿಮಾ ನಿಗಮದ ಜೊತೆ ವಿಮಾ ಪಾಲಸಿಗಳ ಮಾರಾಟದ ವ್ಯವಹಾರದ ಒಪ್ಪಂದ ಮಾಡಿಕೊಂಡಿವೆ.

ಭಾರತೀಯ ಜೀವ ವಿಮಾ ನಿಗಮದ ರಾಯಚೂರು ಸೀನಿಯರ್ ಡಿವಿಜನಲ್ ಮ್ಯಾನೇಜರ್ ವೆಂಕಟೇಶ್ ಪ್ರಸಾದ್ ಅವರು ಮಾತನಾಡಿ, ಕೇಂದ್ರ ಸರ್ಕಾರದ ಇನ್ಶೂರೆನ್ಸ್ ರೆಗ್ಯುಲೇಟರಿ ಡೆವಲಪ್‌ಮೆಂಟ್ ಅಥಾರಿಟಿ (ಐಆರ್‌ಡಿಎ)ಯು ಸುಕೋ ಬ್ಯಾಂಕ್ ವಿಮಾ ವ್ಯವಹಾರ ನಡೆಸಲು ಪರವಾನಿಗೆ ನೀಡಿದೆ. ಐಆರ್‌ಡಿಎ ಪರವಾನಿಗೆಯ ಷರತ್ತು ಮತ್ತು ನಿಯಮಗಳಿಗೆ ಅನುಗುಣವಾಗಿ ಎಲ್‌ಐಸಿ ಮತ್ತು ಸುಕೋ ಬ್ಯಾಂಕ್ ಒಪ್ಪಂದ ಮಾಡಿಕೊಳ್ಳುತ್ತಿರುವುದು ವ್ಯವಹಾರಿಕವಾಗಿ ಉತ್ತಮವಾದ ಬೆಳವಣಿಗೆ ಎಂದರು.

ಸುಕೋ ಬ್ಯಾಂಕ್ ಪ್ರತಿನಿಧಿಯಾಗಿ ಒಪ್ಪಂದಕ್ಕೆ ಸಹಿ ಹಾಕಿ, ಮಾತನಾಡಿದ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕರಾದ ಪರಿಮಳಾಚಾರ್ಯ ಎಸ್. ಅಗ್ನಿಹೋತ್ರಿ ಅವರು, ಐಆರ್‌ಡಿಎದಿಂದ ಪರವಾನಿಗೆ ಪಡೆದ ಉತ್ತರ ಕರ್ನಾಟಕದ ಪ್ರಪ್ರಥಮ ಸಹಕಾರಿ ಬ್ಯಾಂಕ್ ಸುಕೋ ಬ್ಯಾಂಕ್. ಪ್ರಸ್ತುತ ಎಲ್‌ಐಸಿ ಜೊತೆ ಒಪ್ಪಂದ ಮಾಡಿಕೊಳ್ಳುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹಲವು ಇನ್ಶೂರೆನ್ಸ್ ಕಂಪನಿಗಳು, ಜನರಲ್ ಇನ್ಶೂರೆನ್ಸ್ ಮತ್ತು ಹೆಲ್ತ್ ಇನ್ಶೂರೆನ್ಸ್ ಕ್ಷೇತ್ರಕ್ಕೂ ನಾವುಗಳು ಪ್ರವೇಶಿಸಲಿದ್ದೇವೆ ಎಂದರು.

ಜಿ.ಎಂ. ವೆಂಕಟೇಶ್, ಸುಕೋ ಬ್ಯಾಂಕ್‌ನ ವಿಮಾ ವಿಭಾಗದ ಮುಖ್ಯಸ್ಥರು ಮಾತನಾಡಿ, ಸುಕೋ ಬ್ಯಾಂಕ್‌ನ ಎಲ್ಲಾ ಶಾಖೆಗಳಲ್ಲೂ ಗ್ರಾಹಕರು ಎಲ್‌ಐಸಿ ವಿಮಾ ಪಾಲಸಿಗಳ ಮಾಹಿತಿ, ಖರೀದಿ, ಪಾಲಿಸಿಗಳ ಮೇಲೆ ಸಾಲ ಸೌಲಭ್ಯ ಮತ್ತು ಕ್ಲೇಮ್ ಸೌಲಭ್ಯಗಳನ್ನು ಪಡೆಯಬಹುದು ಎಂದರು.

ಸುಕೋ ಬ್ಯಾಂಕ್ 16 ಜಿಲ್ಲೆಗಳಲ್ಲಿ ಕಾರ್ಯಕ್ಷೇತ್ರದ ಪರವಾನಿಗೆ ಪಡೆದು 11 ಜಿಲ್ಲೆಗಳಲ್ಲಿ 28 ಶಾಖೆಗಳನ್ನು ಹೊಂದಿದೆ. ಮಾರ್ಚ್ ಅಂತ್ಯಕ್ಕೆ 1122 ಕೋಟಿ ರೂಪಾಯಿಗಳ ಒಟ್ಟು ವಹಿವಾಟು ನಡೆಸಿ, ಕರ್ನಾಟಕದ ಸಹಕಾರಿ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದೆ. ವಿಮಾ ಕ್ಷೇತ್ರವನ್ನು ಪ್ರವೇಶಿಸುತ್ತಿರುವುದು ಬ್ಯಾಂಕ್‌ನ 'ಗ್ರಾಹಕಸ್ನೇಹಿ' ಸಂಕಲ್ಪಕ್ಕೆ ಹೆಚ್ಚಿನ ಒತ್ತು ನೀಡಲಿದೆ.

## ಆರ್.ಡಿ ಸೋನಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯಿಂದ ಸಾಮಾಜಿಕ ಕಾರ್ಯಕ್ರಮ



